# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಡಿಸೆಂಬರ್-2013
ಬೆಲೆ ರೂ. 1




## ಯಕ್ಷಗಾನ ಮತ್ತು ಪರಿಸರಕ್ಕೆ – ಡಾ. ಶಿವರಾಮ ಕಾರಂತ ಪ್ರಶಸ್ತಿ



ರಾಜ್ಯೋತ್ಸವದ ಅಂಗವಾಗಿ
ಸಾಹಿತ್ಯ ಯಾತ್ರೆ

ಸಂಘದ ಆವರಣದಲ್ಲಿ ಮೆರೆದ
ಕರ್ನಾಟಕದ ಜಾನಪದ ಕಲೆಗಳು





ಮರೆತರೂ ಮರೆಯಲಾಗದ
ಅನಭಿಜ್ಞ ಶಾಕುಂತಲ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 3

ಡಿಸೆಂಬರ್ 2013, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ:
9958697823

ಉಪಾಧ್ಯಕ್ಷರು
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ:
9811325440

ಕೋಶಾಧಿಕಾರಿ
ಡಾ. ಅವನೀಂದ್ರನಾಥ್ ರಾವ್
9868123382

ಜಂಟಿ ಕಾರ್ಯದರ್ಶಿಗಳು
ಎಸ್.ಸಿ. ಹೇಮಲತಾ:
9971121636
ಟಿ.ಎಂ. ಮೈಲಾರಪ್ಪ:
9868347461

ಸಮಿತಿ ಸದಸ್ಯರು
ಆಂಜನಿ ಗೌಡ:
9811165354
ರಾಧಾಕೃಷ್ಣ:
9818252183
ಪೂರ್ಣಿಮಾ ಗೌಡ:
8860916899
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ


## ನೇರ ಮಾತು

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಕನಸು ಬಹಳ ದಿನಗಳದ್ದಾಗಿತ್ತು. ಸಮುಚ್ಚಯದ ಸ್ವರೂಪ ಹೇಗಿರಬೇಕು ಎಂಬ ಕುರಿತು ಎರಡು ವಿಭಿನ್ನ ಅಭಿಪ್ರಾಯಗಳು ರೂಪಗೊಂಡಿದ್ದವು. ಬಹಳಷ್ಟು ಬಾರಿ ಸರ್ವ ಸದಸ್ಯರ ವಿಶೇಷ ಸಭೆಗಳನ್ನು ಕರೆದು ಒಮ್ಮತವಾದ ಅಭಿಪ್ರಾಯಕ್ಕಾಗಿ ಆಯಾಯ ಕಾಲದ ಕಾರ್ಯಕಾರಿ ಸಮಿತಿಗಳು ಶ್ರಮ ಪಟ್ಟಿವೆ. ಒಂದೆಡೆ ಅತ್ಯಂತ ಪರಿಶ್ರಮದಿಂದ ಬೆಳೆಸಿದ ಸಂಘದ ಸ್ಥಿರಾಸ್ತಿಯನ್ನು ಅದರ ಆರ್ಥಿಕ ಬಲದೊಂದಿಗೆ ತುಲನೆ ಮಾಡಿದರೆ, ಇನ್ನೊಂದೆಡೆ ಮುಂದಿನ ಯೋಜನೆಗಳ ಕುರಿತು ಮಹತ್ವಾಕಾಂಕ್ಷೆಯನ್ನಿಟ್ಟು ಎದುರಿಗಿರುವ ಸವಾಲನ್ನು ಎದುರಿಸುವ ಧೈರ್ಯವಿತ್ತು. ಕೊನೆಗೆ ಸರ್ವ ಸದಸ್ಯರ ಅನುಮತಿಯನ್ನು ತೆಗೆದುಕೊಂಡು ಅಂದಿನ ಅಧ್ಯಕ್ಷ ಕೆ.ಆರ್. ನಾಗರಾಜ್ ಅವರು ಸಂಘದ ಇನ್ನೋರ್ವ ಮಾಜಿ ಅಧ್ಯಕ್ಷ, ಕನ್ನಡ ಹಿತೈಷಿ ಇನ್ನ ರಾಮಮೋಹನ್ ರಾವ್ ಅವರ ನೇತೃತ್ವದಲ್ಲಿ ಈಗಿರುವ ಹೊಸ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡರು.

ಸಂಘದಲ್ಲಿ ಹೊಸ ಚೈತನ್ಯದ ಅಗತ್ಯವಿದೆ ಎಂದು ಮನಗಂಡವರು ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಂಘದ ಕುರಿತು ಬಹಳಷ್ಟು ಕಳಕಳಿಯಿದ್ದ, ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮಾಡಬಲ್ಲೆವು ಎಂಬ ಆತ್ಮವಿಶ್ವಾಸವಿದ್ದ ತಂಡವನ್ನು ಮುಂದಿಟ್ಟಾಗ ಸಂಘದ ಸದಸ್ಯರು ಅತ್ಯಂತ ಜವಾಬ್ದಾರಿಯುತವಾಗಿ ಬಹಳಷ್ಟು ಮಂದಿ ಹೊಸಬರಿದ್ದ, ಜತೆಗೆ ಹೊಸಬರೊಂದಿಗೆ ಹೊಸ ಬಗೆಯಲ್ಲಿ ಚಿಂತಿಸಿ ಜತೆಗೂಡಿ ಕೆಲಸಮಾಡಬಲ್ಲ ಅನುಭವಸ್ಥರಿದ್ದ ತಂಡವೊಂದನ್ನು ಸಂಘದ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಿದರು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಸಂಘದ ಆಡಳಿತ ವ್ಯವಸ್ಥೆಯ ಒಳನೋಟವನ್ನು ಅರಿತಿದ್ದ, ಹೊಸ ವಿಶ್ವವಿದ್ಯಾಲಯವೊಂದರ ಆರಂಭದ ಕಷ್ಟಗಳ ಅನುಭವವಿದ್ದ, ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕುರಿತು ಅನನ್ಯ ಅರಿವು ಇದ್ದ ಕನ್ನಡದ ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡರು. ಮುಂದಿನದು ಇತಿಹಾಸ.

ಬಹಳಷ್ಟು ವರ್ಷ ಸಂಘದ ಜೊತೆ ಕೆಲಸ ಮಾಡಿದ ಹಿರಿಯರು, ದೇಶದ ವಿವಿದೆಡೆಯಿದ್ದ ಸಂಘದ ಅಭಿಮಾನಿಗಳು, ವಿವಿಧ ಸಂಸ್ಥೆಗಳಲ್ಲಿದ್ದ ಪ್ರಭಾವಿ ವ್ಯಕ್ತಿಗಳು ಮತ್ತು ಹಿಡಿದ ಕೆಲಸವನ್ನು ಛಲದಿಂದ ಮಾಡಬೇಕೆಂಬ ಹುಮ್ಮಸ್ಸಿದ್ದ ಕಾರ್ಯಕಾರಿ ಸಮಿತಿಯ ಪ್ರಯತ್ನದಿಂದ ಸಂಘದ ಸಾಂಸ್ಕೃತಿಕ ಸಮುಚ್ಚಯವು ತಲೆಯೆತ್ತಿ ನಿಂತಿತು. ವಸಂತ ಪಂಚಮಿಯ ದಿನವಾದ ಫೆಬ್ರವರಿ 13, 2005ರಂದು ಹಿರೇಮಗಳೂರು ಕಣ್ಣನ್ ಅವರಿಂದ ಕನ್ನಡದ ನುಡಿಪೂಜೆಗೊಂಡು ಕಾರ್ಯಾರಂಭವಾಯಿತು. ದೆಹಲಿಯ ಕನ್ನಡಿಗರಿಗಾಗಿ ಬಹಳಷ್ಟು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕಾರ್ಯಕ್ರಮಗಳು ನಿಗದಿತವಾಗಿ ನಡೆಯಲು ಆರಂಭಗೊಂಡವು. ಉಷಾ ಭರತಾದ್ರಿಯವರ ಸಂಪಾದಕತ್ವದಲ್ಲಿ ಸಂಘದ ಮುಖವಾಣಿ ಪತ್ರಿಕೆ ಅಭಿಮತ ಹೊಸರೂಪ ಪಡೆಯಿತು. ಇದೆಲ್ಲರ ಪರಿಣಾಮವಾಗಿ ಸಂಘಕ್ಕೆ ದ.ರಾ. ಬೇಂದ್ರೆ ಪ್ರಶಸ್ತಿ ದೊರೆತು ಸಂಘದ ಕೀರ್ತಿಯ ಮುಕುಟಕ್ಕೆ ಇನ್ನೊಂದು ಗರಿ ಏರಿತು.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯ 2014ರ ಫೆಬ್ರವರಿಗೆ ಹತ್ತನೇ ವರ್ಷಕ್ಕೆ ಕಾಲಿಡಲಿದೆ. ದಶಮಾನೋತ್ಸವದ ಉಲ್ಲಾಸ ಮತ್ತು ಉತ್ಸಾಹವನ್ನು ಉತ್ಸವವನ್ನಾಗಿಸಬೇಕಿದೆ. ಹೊಚ್ಚ ಹೊಸ ಕಾರ್ಯಕ್ರಮಗಳನ್ನು ರೂಪಿಸಿ, ಇದನ್ನೊಂದು ಸ್ಮರಣೀಯ ಪಯಣವನ್ನಾಗಿಸಲು ನಿಮ್ಮೆಲ್ಲರ ಸಲಹೆ, ಸಹಕಾರ ಅತ್ಯಗತ್ಯ. ಈ ಸಂದರ್ಭದಲ್ಲಿ ಸಂಘಕ್ಕಾಗಿ ದುಡಿದ, ದುಡಿಯುತ್ತಿರುವ ಎಲ್ಲರನ್ನೂ ಸ್ಮರಿಸಿಕೊಂಡು, ಒಗ್ಗಟ್ಟಾಗಿ ಕನ್ನಡದ ತೇರನ್ನು ಎಳೆಯಲು ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ಸಂಘ ಇನ್ನಷ್ಟು ದೊಡ್ಡದಾಗಿ ಬೆಳೆಯಲು ನಾವೆಲ್ಲ ಕಾರ್ಯಕ್ರಮಗಳನ್ನು ರೂಪಿಸೋಣ.

ಪ್ರಿಯರೇ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿರುವ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯು 2013–14ರ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಸಂಮಾನವನ್ನು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದೆ ಎಂಬ ಸಿಹಿ ಸುದ್ದಿಯನ್ನು ನಿಮ್ಮೆಲ್ಲರಿಗೂ ಹೆಮ್ಮೆಯಿಂದ ತಿಳಿಸುತ್ತಿದ್ದೇನೆ. ಮುಂದಿನ ಜನವರಿ 19ರಂದು ಈ ಗೌರವವನ್ನು ಕನ್ನಡ ನಾಡು ನುಡಿಯ ಕೆಲಸದಲ್ಲಿ ಸಾಂಸ್ಕೃತಿಕವಾಗಿ ಸೇವೆಯನ್ನು ಸಲ್ಲಿಸುತ್ತಾ, ದೆಹಲಿಯಲ್ಲಿ ಕನ್ನಡ ಸಂಸ್ಕೃತಿಯ ನಿಜವಾದ ರಾಯಭಾರಿಯಾಗಿ ಕೆಲಸ ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘಕ್ಕೆ ನೀಡಲಿದ್ದಾರೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನವೆಂಬರ್ 1ರಿಂದ ಡಿಸೆಂಬರ್ 1 ರವರೆಗೆ ವಿವಿಧ ಹಾಗೂ ವೈವಿಧ್ಯಮಯ ವಿನೂತನ ಕಾರ್ಯಕ್ರಮಗಳನ್ನು ನೀಡುವ ಪ್ರಯತ್ನವನ್ನು ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಕಾರ್ಯಕಾರಿ ಸಮಿತಿಯು ತಮ್ಮ ಮುಂದೆ ಇಟ್ಟಿದೆ. ಈ ಕಾರ್ಯಕ್ರಮಗಳು ಯಶಸ್ವಿಯಾಗಿವೆ ಎಂದುಕೊಂಡಿದ್ದೇವೆ.

ಒಂದು ರೀತಿಯ ಸಾಹಿತ್ಯ ಸಾಂಸ್ಕೃತಿಕ ಜಾತ್ರೆ ಈ ಒಂದು ತಿಂಗಳಿನಲ್ಲಿ ನಡೆದಿದೆ. ನವಂಬರ್ 24ರಂದು ನಡೆದ ಸ್ಥಳೀಯ ಕಲಾವಿದರ 'ಸಾಹಿತ್ಯ ಯಾತ್ರೆ' ಕಾರ್ಯಕ್ರಮವನ್ನು ಇನ್ನಷ್ಟು ತರಬೇತಿ ನೀಡಿ ದೂರದರ್ಶನದಲ್ಲಿ ಪ್ರಸಾರ ಮಾಡುವ ಭರವಸೆಯನ್ನು ದೂರದರ್ಶನದ ಹೆಚ್ಚುವರಿ ಮಹಾನಿರ್ದೇಶಕರಾದ ನಾಡೋಜ ಡಾ.ಮಹೇಶ್ ಜೋಷಿಯವರು ನೀಡಿರುವುದು ಇನ್ನಷ್ಟು ಹೊಸ ಪ್ರಯೋಗಗಳನ್ನು ನಡೆಸಲು ನಮಗೆ ಉತ್ತೇಜನವಾಗಿದೆ. ನವಂಬರ್ 30ರಂದು ನಡೆದ ಸ್ಥಳೀಯ ಮಕ್ಕಳ ಕಾರ್ಯಕ್ರಮ 'ಚಿಣ್ಣರ ಸಾಂಸ್ಕೃತಿಕ ವೈಭವ' ಜನರ ಮನದಲ್ಲಿ ಉಳಿಯುವ ಕಾರ್ಯಕ್ರಮವಾಗಿ ಬಂದಿದೆ. ಸಾಹಿತ್ಯ ಜಾತ್ರೆ ಹಾಗೂ ಚಿಣ್ಣರ ಕಾರ್ಯಕ್ರಮಕ್ಕೆ ಎನ್.ಎಸ್.ಡಿಯ ಪದ್ಮಶ್ರೀ ಹಾಗೂ ಕರ್ನಾಟಕದಿಂದ ಬಂದ ಗುರುಚರಣ್, ತಿಲಕ್ ಹಾಗೂ ಜೀವಾ ಅವರು ಸುಮಾರು 80ಕ್ಕೂ ಹೆಚ್ಚು ಸ್ಥಳೀಯ ಕಲಾವಿದರಿಗೆ ತರಬೇತಿಯನ್ನು ನೀಡಿ ರಾಜ್ಯೋತ್ಸವ ಕಾರ್ಯಕ್ರಮ ಯಶಸ್ವಿಯಾಗಲು ಕಾರಣರಾಗಿದ್ದಾರೆ. ಅವರಿಗೆ ಹಾಗೂ ಶ್ರಮಿಸಿದ ಇನ್ನಿತರರಿಗೆ ಸಂಘದ ಪರವಾಗಿ ಅಭಿನಂದನೆಗಳು. ಹಾಗೂ ಸಹಕರಿಸಿದ ಪ್ರತಿಯೊಬ್ಬರಿಗೂ ನಮ್ಮ ಕೃತಜ್ಞತೆಗಳು.

ದೂರದರ್ಶನದ ಚಂದನವಾಹಿನಿಯ ಜನಪ್ರಿಯ ಕಾರ್ಯಕ್ರಮವಾದ 'ಮಧುರ ಮಧುರ ವೀ ಮಂಜುಳಗಾನ'ದ ಸಿದ್ಧತೆಯಲ್ಲಿದ್ದೇವೆ. ಅತ್ಯಂತ ಹೆಚ್ಚು ಕನ್ನಡಿಗರನ್ನು ಈ ಕಾರ್ಯಕ್ರಮದಲ್ಲಿ ಒಟ್ಟು ಸೇರಿಸುವ ಪ್ರಯತ್ನ ನಮ್ಮದಾಗಿರಬೇಕು. ಅ

***ಸಿ.ಎಂ.ನಾಗರಾಜ, ಪ್ರಧಾನ ಕಾರ್ಯದರ್ಶಿ***



## ದೆಹಲಿ ಕರ್ನಾಟಕ ಸಂಘದಿಂದ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಚಾಲನೆ

ನವೆಂಬರ್ 1 ರಿಂದ ಡಿಸೆಂಬರ್ 1 ರವರೆಗೆ ದೆಹಲಿ ಕರ್ನಾಟಕ ಸಂಘ ವಿವಿಧ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳ ಮೂಲಕ ಆಚರಿಸಲಿರುವ 'ಕರ್ನಾಟಕ ರಾಜ್ಯೋತ್ಸವ' ಕಾರ್ಯಕ್ರಮಕ್ಕೆ ಧ್ವಜಾರೋಹಣ ಮಾಡುವ ಮೂಲಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಚಾಲನೆ ನೀಡಿದರು.

ನಂತರ ಕನ್ನಡ ಭುವನೇಶ್ವರಿಗೆ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಖಜಾಂಚಿ ಡಾ. ವೈ. ಅವನೀಂದ್ರನಾಥ್ ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಎಚ್.ಸಿ. ಹೇಮಲತಾ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ವಿ.ವಿ. ಬಿರಾದಾರ, ಶ್ರೀ ಪಿ.ಸಿ. ಶ್ರೀನಿವಾಸ, ಶ್ರೀ ಆನಂದ ಮುರಗೋಡ, ಶ್ರೀ ರಾಧಾಕೃಷ್ಣ, ಶ್ರೀಮತಿ ಆಶಾ ಶ್ಯಾಮಸುಂದರ್ ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು.





## ಸಂಘದ ಆವರಣದಲ್ಲಿ ಮೆರೆದ ಕರ್ನಾಟಕದ ಜಾನಪದ ಕಲೆಗಳು

ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ನವೆಂಬರ್ 10 ರಿಂದ 17ರವರೆಗೆ ಕರ್ನಾಟಕದ ಜಾನಪದ ಕಲೆಗಳನ್ನು ಪ್ರದರ್ಶಿಸಲಾಯಿತು.

ಸಾಗರದ ಶ್ರೀಮತಿ ಸುಗಂಧ ಮತ್ತು ತಂಡದವರಿಂದ ಡೊಳ್ಳು ಕುಣಿತ, ಬೆಂಗಳೂರಿನ ಕರ್ನಾಟಕ ಜಾನಪದ ಕಂಸಾಳೆ ಕಲಾವಿದರ ಸಂಘದವರಿಂದ ಕಂಸಾಳೆ ಹಾಗೂ ಮೈಸೂರಿನ ಆದಿ ದ್ರಾವಿಡ ತಮಟೆ ಮತ್ತು ನಗಾರಿ ಸಾಂಸ್ಕೃತಿಕ ಕಲಾ ತಂಡದವರಿಂದ ನಗಾರಿಯ ಪ್ರದರ್ಶನವು ನಿರಂತರವಾಗಿ ನಡೆಯಿತು.

ಸಂಘದ ಪರಿಸರದಲ್ಲಿರುವ ಕನ್ನಡೇತರರೂ ಕರ್ನಾಟಕದ ಈ ಜಾನಪದ ಸಾಂಸ್ಕೃತಿಕ ಕಲೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

---

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**15 ಡಿಸೆಂಬರ್ 2013**

**ಭಾನುವಾರ ಸಂಜೆ : 3.00 ಗಂಟೆಗೆ**

**ಕರ್ನಾಟಕ ಸರ್ಕಾರ, ವಾರ್ತಾ ಇಲಾಖೆ, ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ ಹಾಗೂ ದೆಹಲಿ ಕರ್ನಾಟಕ ಸಂಘ, ನವದೆಹಲಿ ಇವರ ಸಂಯುಕ್ತ ಆಶ್ರಯದಲ್ಲಿ**

ದೇವರಾಜ್, ರಮ್ಯಕೃಷ್ಣ, ಪ್ರೇಮ ಮತ್ತು ಸುಮನ್ ಅಭಿನಯದ

ಕನ್ನಡ ಚಲನಚಿತ್ರ : ನೀಲಾಂಬರಿ

**ಸಂಜೆ : 6.00 ಗಂಟೆಗೆ**

**ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ಮಕ್ಕಳಿಂದ**

ನಾಟಕ : ಬೊಮ್ಮನ ಹಳ್ಳಿ ಕಿಂದರಿಜೋಗಿ

**ರಚನೆ** : ಕುವೆಂಪು **ನಿರ್ದೇಶನ** : ರಾಮಕೃಷ್ಣ ಬೆಳ್ತೂರು

**ಸಂಗೀತ** : ರಾಜಪ್ಪ ಕೋಲಾರ **ನಿರ್ವಹಣೆ** : ಟಿ.ಎಂ. ಮೈಲಾರಪ್ಪ

**ಸ್ಥಳ** : ದೆಹಲಿ ಕರ್ನಾಟಕ ಸಂಘದ ಸಭಾಂಗಣ

**ಆಯೋಜಕರು** : ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ

**5 ಜನವರಿ 2014** **ಭಾನುವಾರ ಸಂಜೆ : 5.00 ಗಂಟೆಗೆ**

**ಭಾಷ್ ಲಲಿತ ಕಲಾ ಸಂಘ, ನಾಗನಾಥಪುರ ಕಲಾವಿದರಿಂದ**

ನಾಟಕ : ಮಂಗ ಮಾಣಿಕ್ಯ ಪ್ರಹಸನ

**ಹಿಂದಿ ಮೂಲ** : ವಸಂತ ಸಬನಿಸ್, **ಕನ್ನಡ ರೂಪ** : ಹೋ.ನಾ. ಸತ್ಯ

**ನಿರ್ದೇಶನ** : ಕೆ.ಆರ್. ಶ್ರೀನಿವಾಸ ಮೇಷ್ಟ್ರು

**ಸ್ಥಳ** : ದೆಹಲಿ ಕರ್ನಾಟಕ ಸಂಘದ ಸಭಾಂಗಣ

### ಹಿಂದೂಸ್ತಾನಿ ಸಂಗೀತ

ಪಂಡಿತ್ ಸೋಮನಾಥ್ ಮರಡೂರ್ ಅವರಿಂದ ಹಿಂದೂಸ್ತಾನಿ ಸಂಗೀತ ತರಗತಿಗಳು ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ

### ತಬಲಾ ಕಲಿಕೆ

ಶ್ರೀ ಸುಧೀರ್ ಫಡ್ನೀಸ್ ಅವರಿಂದ ತಬಲಾ ಕಲಿಕೆ ತರಗತಿ ಪ್ರತಿ ಭಾನುವಾರ ಬೆಳಿಗ್ಗೆ 11.30ರಿಂದ.

ಆಸಕ್ತಿಯುಳ್ಳವರು ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ : 26109615 / 65643615 8860848584 / 8860848585

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ
*ಭಾನುವಾರ, 15 ಡಿಸೆಂಬರ್ 2013ರಂದು ಬೆಳಿಗ್ಗೆ 10 ಗಂಟೆಯಿಂದ.*

**ಡಾ. ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ
*ಭಾನುವಾರ, 29 ಡಿಸೆಂಬರ್ 2013ರಂದು ಸಾಯಂಕಾಲ 4 ಗಂಟೆಯಿಂದ.*

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848584 / 8860848585 – 011–26109615 / 65643615

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ

## ಚಿತ್ರ ಒಂದು ದಾಖಲೆ : ಅಮರ್ ಸಿಂಗ್

ಕನ್ನಡ ಚಲನಚಿತ್ರ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ರಿಚರ್ಡ್ ಅಟೆನ್‌ಬರೋನ ಹಾಲಿವುಡ್ ಚಿತ್ರ 'ಗಾಂಧಿ'ಗೆ ಸಮವಾಗಿ ನಿಲ್ಲಬಲ್ಲ ಸಿನೆಮಾ ಎಂದು ಹಿರಿಯ ರಾಜಕಾರಣಿ, ರಾಜ್ಯ ಸಭಾ ಸದಸ್ಯ ಶ್ರೀ ಅಮರ್ ಸಿಂಗ್ ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘದಲ್ಲಿ ರಾಜ್ಯೋತ್ಸವ ಪ್ರಯುಕ್ತ ನವೆಂಬರ್ 10ರಂದು ಏರ್ಪಡಿಸಲಾಗಿದ್ದ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಲನಚಿತ್ರ ಪ್ರದರ್ಶನವನ್ನು ರಾಜ್ಯ ಸಭಾ ಸದಸ್ಯೆ ಬಿ. ಜಯಶ್ರೀ, ಲೋಕಸಭೆ ಸದಸ್ಯೆ ಮತ್ತು ಈ ಚಿತ್ರದಲ್ಲಿ ಕಿತ್ತೂರು ಚೆನ್ನಮ್ಮಳ ಪಾತ್ರಧಾರಿ, ನಟಿ, ಜಯಪ್ರದಾ, ಚಿತ್ರದ ನಿರ್ಮಾಪಕ ಆನಂದ್ ಅಪ್ಪುಗೋಳ್ ಮುಂತಾದವರ ಜೊತೆ ವೀಕ್ಷಿಸಿದ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಶ್ರೀ ಅಮರ್ ಸಿಂಗ್ ಅವರು ಈ ಅಭಿಪ್ರಾಯ ಪಟ್ಟರು.

ದೇಶದಲ್ಲಿ ಇಂತಹ ಜೀವನ ಚರಿತ್ರೆಯನ್ನು ನಿಖರವಾಗಿ ಚಿತ್ರಿಸಿದ ಚಲನ ಚಿತ್ರಗಳು ಬಹಳ ಕಡಿಮೆ. ಬಾಲಿವುಡ್ ಪ್ರಸಿದ್ಧ ಚಿತ್ರ 'ಮೊಘಲ್ ಇ ಅಜಂ' ಕಾಲ್ಪನಿಕ ಕಥೆಯನ್ನು ಒಳಗೊಂಡಿದ್ದ ಚಿತ್ರವಾಗಿದೆ. ರಾಮಾಯಣ, ಮಹಾಭಾರತಗಳನ್ನು ಆಧಾರಿಸಿದ ಚಿತ್ರಗಳು ಬಂದಿದ್ದರೂ ಕೂಡ ಅವುಗಳು ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಕಾವ್ಯಗಳು. ಆದರೆ 'ಸಂಗೊಳ್ಳಿ ರಾಯಣ್ಣ' ಆ ಕಾಲದ ದಾಖಲೆಯ ರೂಪದಲ್ಲಿದೆ ಎಂದು ಅಮರ್ ಸಿಂಗ್ ಮೆಚ್ಚುಗೆ ಸೂಚಿಸಿದರು.





### ಅಪ್ಪುಗೋಳ್ ಸ್ವದೇಶಿ ಪ್ರೇಮ

ಅನಿವಾಸಿ ಕನ್ನಡಿಗರು ತಮ್ಮಲ್ಲಿ ಬಂದು ಈ ಚಿತ್ರವನ್ನು ಪ್ರದರ್ಶನ ಮಾಡಿ ಎಂದು ಕೇಳಿಕೊಂಡಿದ್ದರು. ಆದರೆ ನಾನು ಅದಕ್ಕೆ ಜಪ್ಪಯ್ಯ ಎನ್ನಲಿಲ್ಲ. ನಾನು ವಿದೇಶಿಯರಿಗೆ ಈ ಚಿತ್ರ ತೋರಿಸುವೆನೆ ಹೊರತು ತುತ್ತು ಅನ್ನದ ಆಸೆಗಾಗಿ ವಿದೇಶದಲ್ಲಿ ನೆಲೆಸಿರುವವರಿಗೆ ಅಲ್ಲ. ನಾನು ಹಣದಾಸೆಗಾಗಿ ಈ ಚಿತ್ರ ಮಾಡಿಲ್ಲ. ವಿದೇಶಗಳಿಗೆ ವ್ಯಾಸಂಗಕ್ಕೆ ಹೋದವರು ಅಲ್ಲಿನ ಜನರಿಗೆ ನಮ್ಮ ಸಂಸ್ಕೃತಿಯನ್ನು ಕಲಿಸಿ ಕೊಟ್ಟು ದೇಶಕ್ಕೆ ವಾಪಾಸ್ ಆಗಬೇಕು ಎಂದು ಕರೆ ನೀಡುವುದರ ಜೊತೆಗೆ ತಮ್ಮ ಸ್ವದೇಶಿ ಪ್ರೇಮವನ್ನು ಚಿತ್ರದ ನಿರ್ಮಾಪಕ ಆನಂದ್ ಅಪ್ಪುಗೋಳ್ ವಿವರಿಸಿದರು.

ಈ ಚಿತ್ರದಲ್ಲಿ 'ಕಿತ್ತೂರು ಚೆನ್ನಮ್ಮ'ಳ ಪಾತ್ರದಲ್ಲಿ ಮಿಂಚಿದ್ದ, ತಮ್ಮ ರಾಜಕೀಯ ಶಿಷ್ಯೆ ಜಯಪ್ರದಾಳ ಅಭಿನಯದ ಪ್ರಶಂಸೆ ಮಾಡಿ ತಮ್ಮ ಕಷ್ಟ ಕಾಲದಲ್ಲಿ ಆಕೆ ತನಗೆ ತೋರ್ಪಡಿಸಿದ ನಿಷ್ಠೆ, ಪ್ರಾಮಾಣಿಕತೆಗಳನ್ನೂ ಅಮರ್‌ಸಿಂಗ್ ಮೆಚ್ಚಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಸಭೆ ಸದಸ್ಯೆ, ರಂಗಕರ್ಮಿ ಬಿ. ಜಯಶ್ರೀ, ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಕೂಗು ಕೇಳಬೇಕಾದ ಅಗತ್ಯತೆಯನ್ನು ಒತ್ತಿ ಹೇಳಿದರು. ಸಂಗೊಳ್ಳಿ ರಾಯಣ್ಣನ ಮೂಲಕ ದೂರದ ಕರುನಾಡು ದೆಹಲಿ ತಲುಪಿದಂತಾಗಿದೆ, ಇಂತಹ ಕೆಲಸಗಳು ನಿರಂತರವಾಗಿರಬೇಕು ಎಂಬ ತಮ್ಮ ಕಾಳಜಿಯನ್ನು ಮೆರೆದರು.

ಚಿತ್ರದ ನಿರ್ಮಾಪಕ ಆನಂದ್ ಅಪ್ಪುಗೋಳ್ ಅವರು ಮಾತಾಡುತ್ತಾ, 'ಸಂಗೊಳ್ಳಿ ರಾಯಣ್ಣ' ಚಿತ್ರ ತನ್ನನ್ನು ಕಳೆದ 15 ವರ್ಷಗಳ ಕನಸು ಮನಸ್ಸಿನಲ್ಲಿ ಕಾಡಿದ್ದ ಪ್ರಸಂಗವನ್ನು ವಿವರಿಸಿದರು. ಇದು ನನ್ನ ಜೀವಮಾನದ ಕನಸಿನ ಚಿತ್ರ. ಚಿತ್ರದ ಬಜೆಟ್ ಬಗ್ಗೆ ಎಲ್ಲಿಯೂ ರಾಜಿಯೇ ಆಗಿಲ್ಲ, ಕನ್ನಡ ನಾಡು, ನುಡಿ, ಪರಿಸರ, ಸಂಸ್ಕೃತಿಯ ದೇಶಿಯತೆಗೆ ಧಕ್ಕೆಯಾಗದಂತೆ ಚಿತ್ರವನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಸಂಗೊಳ್ಳಿ ರಾಯಣ್ಣ, ಕಿತ್ತೂರು ಚೆನ್ನಮ್ಮ ಮುಂತಾದ ಮಹನೀಯರನ್ನು ಜಾತಿಗೆ ಸೀಮಿತಗೊಳಿಸುವ ಅಪಾಯವನ್ನು ದೆಹಲಿ ಕನ್ನಡಿಗರ ಮುಂದಿಟ್ಟ ಅಪ್ಪುಗೋಳ್, ಜಾತಿಮತ ಪಂಥಗಳನ್ನು ಮೀರಿ ಇಂತಹ ನಾಯಕರನ್ನು ಗುರುತಿಸಿ ಗೌರವಿಸಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಹುಡ್ಕೋ ಮುಖ್ಯಸ್ಥ ವಿ. ಪಿ. ಬಳಿಗಾರ್, ಝಾನ್ಸಿರಾಣಿ ಲಕ್ಷ್ಮೀ ಬಾಯಿ ಅವರಿಗಿಂತಲೂ ಮೊದಲೇ ಬ್ರಿಟೀಷರ ವಿರುದ್ಧ ಸಮರ ಸಾರಿದ್ದ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣನ ಬಗ್ಗೆ ದೇಶ, ವಿದೇಶದ ಜನರಿಗೆ ತಿಳಿಯಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ಮುಖ್ಯ ಅತಿಥಿಯಾಗಿದ್ದ ಜಯಪ್ರದಾ, ಸನಾದಿ ಅಪ್ಪಣ್ಣನಿಂದ ಸಂಗೊಳ್ಳಿ ರಾಯಣ್ಣ ಚಿತ್ರದ ವರೆಗಿನ ಸುಮಾರು ಮೂರು ದಶಕಗಳ ಕನ್ನಡ ಚಿತ್ರರಂಗದೊಡಗಿನ ತಮ್ಮ ಒಡನಾಟವನ್ನು ನೆನಪಿಸಿಕೊಂಡರು. 'ಸಂಗೊಳ್ಳಿ ರಾಯಣ್ಣ' ಪಾತ್ರ ನಿರ್ವಹಿಸಿದ ದರ್ಶನ್ ತೂಗುದೀಪ ಅವರ ಅಭಿನಯಕ್ಕೆ ನೂರಕ್ಕೆ ನೂರು ಅಂಕಗಳನ್ನು ನೀಡಿದರು.

'ಕಿತ್ತೂರು ಚೆನ್ನಮ್ಮ' ಪಾತ್ರ ಅತ್ಯಂತ ಸ್ಮರಣೀಯ, ನಾನು ಸಂಸತ್ತಿನ ಆವರಣದಲ್ಲಿರುವ ಕಿತ್ತೂರು ಚೆನ್ನಮ್ಮ ಪ್ರತಿಮೆಯನ್ನು ನೋಡಿ, ಅದಕ್ಕೆ ನಮಸ್ಕರಿಸಿ ಈ ಪಾತ್ರ ನಿರ್ವಹಿಸುವ ಸ್ಫೂರ್ತಿಯನ್ನು ಪಡೆದುಕೊಂಡ ಸಂಗತಿಯನ್ನು ಜಯಪ್ರದಾ ಅವರು ಬಹಿರಂಗ ಪಡಿಸಿದರು.

ಇದೇ ಸಂದರ್ಭದಲ್ಲಿ ಸುವರ್ಣ ವಾಹಿನಿಯ ವಿನಾಯಕ್ ರಾಮ್ ಅವರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಚಿತ್ರದಲ್ಲಿನ ಚೆನ್ನಮ್ಮ ಪಾತ್ರಕ್ಕಾಗಿ ಜಯಪ್ರದಾ ಅವರಿಗೆ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಪ್ರದಾನ ಮಾಡಿದರು. ಅ

# ದೆಹಲಿ ಕರ್ನಾಟಕ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿವಿಜೇತರು



ಅಂತಾರಾಷ್ಟ್ರೀಯ ಮ್ಯಾರಾಥನ್ ಓಟಗಾರ್ತಿ ಶ್ರೀಮತಿ ಮಾಲಾ ಹೊನ್ನತ್ತಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಈ ಸಾಲಿನ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಯನ್ನು ಹಿರಿಯ ರಂಗಕಲಾವಿದೆ, ರಾಜ್ಯ ಸಭಾ ಸದಸ್ಯೆ ಬಿ. ಜಯಶ್ರೀ ಅವರು ಸಂಘದ ಸಭಾಂಗಣದಲ್ಲಿ ನವೆಂಬರ್ 10ರಂದು ಏರ್ಪಡಿಸಲಾಗಿದ್ದ ಸಮಾರಂಭವೊಂದರಲ್ಲಿ ನೀಡಿ ಗೌರವಿಸಿದರು.

ಸಮಾರಂಭದಲ್ಲಿ ರಾಜ್ಯ ಸಭಾ ಸದಸ್ಯ ಶ್ರೀ ಅಮರ್ ಸಿಂಗ್, ನಟಿ ಜಯಪ್ರದಾ, ಚಲನ ಚಿತ್ರ ನಿರ್ಮಾಪಕ ಆನಂದ್ ಅಪ್ಪುಗೋಳ್, ಹುಡ್ಕೋ ಮುಖ್ಯಸ್ಥ ಶ್ರೀ ವಿ. ಪಿ. ಬಳಿಗಾರ್, ಮೊದಲಾದವರು ಉಪಸ್ಥಿತರಿದ್ದರು.

ಶ್ರೀಮತಿ ಮಾಲಾ ಹೊನ್ನತ್ತಿ ಅವರು ಮಾತನಾಡಿ, ದೆಹಲಿ ಕರ್ನಾಟಕ ಸಂಘ ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳ ಸೀಮಿತತೆಯನ್ನು ದಾಟಿ ಕ್ರೀಡಾಪಟು ಒಬ್ಬರನ್ನು ಗೌರವಿಸಿದ್ದು ಖುಷಿ ಕೊಟ್ಟಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾತಾಡಿದ ಕಲಾವಿದೆ ಜಯಶ್ರೀ ಅವರು ದೆಹಲಿ ಕನ್ನಡಿಗರಿಗೆ ರಂಗಗೀತೆಗಳನ್ನು ಕಲಿಸಿ ಕೊಡಲು ತಮಗಿರುವ ಉತ್ಸುಕತೆಯನ್ನು ವ್ಯಕ್ತಪಡಿಸಿದರು.

ಸಂಘದ ಖಜಾಂಜಿ ಡಾ. ವೈ. ಅವನೀಂದ್ರನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನು ಆಡಿದರು. ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ವಂದಿಸಿದರು. ಅ



## ಮಾಲಾ ಹೊನ್ನತ್ತಿ

ಮೂಲತ: ಹಾವೇರಿ ಜಿಲ್ಲೆಯವರಾದ ಶ್ರೀಮತಿ ಮಾಲಾ ಹೊನ್ನತ್ತಿಯವರು ಅಂತಾರಾಷ್ಟ್ರೀಯ ಖ್ಯಾತಿಯ ಮ್ಯಾರಥಾನ್ ಓಟಗಾರ್ತಿ. ಬಿ.ಎಸ್ಸಿ ಮತ್ತು ಕಾನೂನು ವಿಷಯಗಳಲ್ಲಿ ಪದವೀಧರೆಯಾಗಿರುವ ಮಾಲಾ ಅವರು ವಿದ್ಯಾರ್ಥಿ ದೆಸೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿಭಾವಂತೆ. ಸಿಂಡಿಕೇಟ್ ಬ್ಯಾಂಕಿನಲ್ಲಿ ವೃತ್ತಿ ಆರಂಭಿಸಿದ ಇವರು 2007ರಲ್ಲಿ ಇಂಡಸ್ ಬ್ಯಾಂಕಿನ ಮುಖ್ಯ ಪ್ರಬಂಧಕರಾಗಿ ನಿವೃತ್ತರಾಗಿದ್ದಾರೆ. ಶ್ರೀಮತಿ ಮಾಲಾ ಅವರು ಓಟಗಾರ್ತಿಯಾಗಿ ಇದುವರೆಗೆ 15 ಫುಲ್ ಮ್ಯಾರಾಥಾನ್ ಮತ್ತು ಎರಡು ಆಲ್ಟ್ರಾ ಮ್ಯಾರಾಥಾನ್ ಓಟದಲ್ಲಿ ಜಗತ್ತಿನಾದ್ಯಂತ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದಾರೆ. ಮುಂಬಯಿ ಮ್ಯಾರಾಥಾನ್ ನಲ್ಲಿ ಹ್ಯಾಟ್ರಿಕ್ ಚಿನ್ನದ ಪದಕ ಗಳಿಸಿದ್ದಾರೆ. ಅಮೆರಿಕಾ, ಜಪಾನ್ ಮತ್ತು ಚೈನಾಗಳ ಬೇಸ್ ಕ್ಯಾಂಪ್ ಮ್ಯಾರಾಥಾನ್ ಮತ್ತು ಅಂಟಾರ್ಟಿಕ ಮ್ಯಾರಥಾನ್ ಶ್ರೀಮತಿ ಮಾಲಾ ಅವರು ಸಾಧಿಸಿದ ಮುಖ್ಯ ಮ್ಯಾರಥಾನ್‌ಗಳು. ಇದರೊಂದಿಗೆ ಅತಿಥಿ ತರಬೇತುದಾರರಾಗಿ ಹಲವು ಕಡೆ ಕ್ರೀಡೆಯ ಬೆಳವಣಿಗೆಗೆ ತೊಡಗಿಕೊಂಡಿರುವ ಶ್ರೀಮತಿ ಮಾಲಾ ಹೊನ್ನತ್ತಿಯವರು ಮುಂದಿನ ವರ್ಷ ಹಿಮಾಲಯದ ಶಿಖರವನ್ನು ಏರುವ ಯೋಜನೆಯನ್ನು ಕೈಗೊಂಡಿದ್ದಾರೆ.



## ಎಸ್.ಕೆ.ಕುಲಕರ್ಣಿ

ಬಿಜಾಪುರ ಜಿಲ್ಲೆಯ ಬಿಳಗಿಯಲ್ಲಿ ಜನಿಸಿದ ಶ್ರೀ ಎಸ್.ಕೆ. ಕುಲಕರ್ಣಿ ಅವರು ಬಿ.ಎ. (ಆನರ್ಸ್) ಪದವಿ ನಂತರ ಕಾನೂನು ಪದವಿ ಗಳಿಸಿದರು. ಇವರು ಧಾರವಾಡದ ಯೂನಿವರ್ಸಿಟಿ ಕಾಲೇಜಿಗೆ ಪ್ರಥಮರಾಗಿ ಉತ್ತೀರ್ಣರಾಗಿದ್ದಾರೆ. ಕರ್ನಾಟಕದ ಹೈಕೋರ್ಟ್‌ನಲ್ಲಿ 1971ರಿಂದ ಕಾನೂನು ವೃತ್ತಿ ಆರಂಭಿಸಿ 1987ರಿಂದ ಸುಪ್ರೀಂಕೋರ್ಟ್‌ನಲ್ಲಿ ವೃತ್ತಿಯನ್ನು ಮುಂದುವರಿಸಿದರು. ಕರ್ನಾಟಕ ವಿದ್ಯುತ್ ಮಂಡಳಿ, ಹೌಸಿಂಗ್ ಬೋರ್ಡ್ ಮತ್ತು ಬಿಡಿಎಗಳಂತಹ ಸಂಸ್ಥೆಗಳನ್ನು ಕಾನೂನು ತಜ್ಞರಾಗಿ ಅವರು ಪ್ರತಿನಿಧಿಸಿದ್ದಾರೆ.

1990ರಿಂದ 1995ರ ನಡುವೆ ಎರಡು ಅವಧಿಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಸಂವಿಧಾನ ತಿದ್ದುಪಡಿ ಸಮಿತಿ ಮತ್ತು ಕಟ್ಟಡ ಉಪಸಮಿತಿಗಳ ಸದಸ್ಯರಾಗಿ ಸಂಘದ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ.

# ಸಾಲುಮರದ ತಿಮ್ಮಕ್ಕ ಮತ್ತು ಬನ್ನಂಜೆ ಸಂಜೀವ ಸುವರ್ಣ

## ಅವರಿಗೆ ಡಾ. ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ



ಡಾ. ಶಿವರಾಮ ಕಾರಂತರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮಹನ್ನತ ಕೃತಿಗಳನ್ನು ರಚಿಸಿರುವ ಜತೆಗೆ ಸಾಮಾನ್ಯ ಜ್ಞಾನ ಮತ್ತು ವಿಜ್ಞಾನದ ಕುರಿತಾದ ಬಹಳಷ್ಟು ಕೃತಿಗಳನ್ನು ರಚಿಸಿದ್ದಾರೆ ಎಂದು ಭಾರತ ಸರಕಾರದ ಮಾಜಿ ಪ್ರಧಾನ ವಾರ್ತಾಧಿಕಾರಿ ಶ್ರೀ ಐ. ರಾಮಮೋಹನ್ ರಾವ್ ಅವರು ಹೇಳಿದ್ದಾರೆ. ಅವರು ದೆಹಲಿ ಕರ್ನಾಟಕ ಸಂಘವು ನೀಡುವ ಪ್ರತಿಷ್ಠಿತ ಡಾ. ಕೋಟ ಶಿವರಾಮ ಕಾರಂತ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತಾಡುತ್ತಿದ್ದರು.

ಯಕ್ಷಗಾನ ಕ್ಷೇತ್ರಕ್ಕೆ ಅಪೂರ್ವ ಸೇವೆಸಲ್ಲಿಸಿದ ಗುರು ಶ್ರೀ ಬನ್ನಂಜೆ ಸಂಜೀವ ಸುವರ್ಣ ಅವರಿಗೆ 2010ರ ಸಾಲಿನ ಮತ್ತು ಪರಿಸರ ಕ್ಷೇತ್ರದಲ್ಲಿ ಅಭೂತಪೂರ್ವ ಕಾರ್ಯ ಮಾಡಿರುವ ನಾಡೋಜ ಸಾಲುಮರದ ತಿಮ್ಮಕ್ಕ ಅವರಿಗೆ 2012ರ ಸಾಲಿನ ಶಿವರಾಮ ಕಾರಂತ ಪ್ರಶಸ್ತಿಯನ್ನು ಸಂಘದ ಸಭಾಭವನದಲ್ಲಿ ನವಂಬರ್ 15ರಂದು ನೀಡಿ ಗೌರವಿಸಲಾಯಿತು.

ಶ್ರೀ ಸಂಜೀವ ಸುವರ್ಣ ಅವರು ತಮ್ಮ ಗುರು ಶಿವರಾಮ ಕಾರಂತರ ಹೆಸರಿನಲ್ಲಿರುವ ಪ್ರಶಸ್ತಿಯನ್ನು ಸ್ವೀಕರಿಸಲು ಸಂತಸ ವ್ಯಕ್ತಪಡಿಸಿ ದೆಹಲಿ ಕರ್ನಾಟಕ ಸಂಘದ ಈ ಮನ್ನಣೆಗೆ ಕೃತಜ್ಞತೆ ಅರ್ಪಿಸಿದರು. ಪ್ರಶಸ್ತಿ ಸ್ವೀಕರಿಸಿದ ಸಾಲುಮರದ ತಿಮ್ಮಕ್ಕ ಅವರು ಮಾತನಾಡಿ ತಾವು ನೆಟ್ಟ ಗಿಡಗಳನ್ನು ತಮ್ಮ ಮಕ್ಕಳಂತೆ ಸಾಕಿ ಸಲಹಿದ ವಿವರ ನೀಡಿದರು.

ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಶಿವರಾಮ ಕಾರಂತ ಪ್ರಶಸ್ತಿ ಮತ್ತು ಆಯ್ಕೆಯ ಕುರಿತು ಮಾತನಾಡಿ ಈ ಪ್ರಶಸ್ತಿಯನ್ನು ಸಂಘವು 1998ರಿಂದ ನೀಡಲು ಆರಂಭಿಸಿದೆ. ಸಾಹಿತಿ ಯಶವಂತ ಚಿತ್ತಾಲ ಮತ್ತು ವಿಜ್ಞಾನ ಬರಹಗಾರ ಜಿ.ಟಿ. ನಾರಾಯಣರಾವ್ ಅವರಿಗೆ ಈ ಹಿಂದಿನ ವರ್ಷಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗಿದೆ. ಸಂಘದ ಹೊಸ ಕಟ್ಟಡ ಕಟ್ಟುತ್ತಿರುವ ಸಂದರ್ಭದಲ್ಲಿ ಈ ಪ್ರಶಸ್ತಿಯನ್ನು ನೀಡಲಾಗಲಿಲ್ಲ. ಈ ಬಾರಿಯ ಪ್ರಶಸ್ತಿಗಳನ್ನು ನೀಡಲು ಎಲ್ಲರೊಂದಿಗೆ ಚರ್ಚಿಸಿ ಒಮ್ಮತದ ನಿರ್ಧಾರ ಕೈಗೊಳ್ಳಲಾಯಿತು ಎಂದರು.

ಮುಖ್ಯ ಅತಿಥಿಗಳಾಗಿದ್ದ ಮೈಸೂರಿನ ರಂಗಾಯಣದ ನಿರ್ದೇಶಕ ಶ್ರೀ ಎಚ್. ಜನಾರ್ದನ್, ನವದೆಹಲಿಯ ವಾರ್ತಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಎಲ್.ಪಿ. ಗಿರೀಶ್ ಅವರೂ ಮಾತಾಡಿದರು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಶಸ್ತಿ ವಿಜೇತರನ್ನು ಅಭಿನಂದಿಸಿದರು ಇದೇ ಸಂದರ್ಭದಲ್ಲಿ ವಿವಿಧ ಸ್ಥಳೀಯ ಕನ್ನಡ ಸಂಸ್ಥೆಗಳ ಪದಾಧಿಕಾರಿಗಳು ಕೂಡಾ ಪ್ರಶಸ್ತಿ ವಿಜೇತರನ್ನು ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ ಮತ್ತು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಬೀಚಿ ಬುಲ್ಲೆಟ್ಸ್ ಎಂಬ ಬೀಚಿ ಸಾಹಿತ್ಯ ಆಧಾರಿತ ವಿಶಿಷ್ಟ ನಗೆ ನಾಟಕ, ಮೈಮ್, ತತ್ವಪದ ಹಾಗೂ ರಂಗಗೀತೆಗಳ ಕಾರ್ಯಕ್ರಮವೂ ನಡೆಯಿತು. ಸಂಘದ ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಅವರು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಶ್ರೀಮತಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರ್ವಹಿಸಿದರು. ಅ

***ಅಭಿಮತ ವರದಿ***






# ಯಕ್ಷಗಾನದ ಪುನರುತ್ಥಾನದಲ್ಲಿ ಹೊಸ ದೃಷ್ಟಿಕೋನ ನೀಡಿದವರು ಶಿವರಾಮ ಕಾರಂತರು

**-ಪ್ರೊ. ಎಂ.ಎಲ್. ಸಾಮಗ**

ಯಕ್ಷಗಾನದ ಪುನರುತ್ಥಾನಕ್ಕೆ ಡಾ. ಕೆ. ಶಿವರಾಮ ಕಾರಂತರು ಹೊಸ ದೃಷ್ಟಿಕೋನವನ್ನು ನೀಡಿದ್ದಾರೆ ಎಂದು ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ. ಎಂ.ಎಲ್. ಸಾಮಗ ಅವರು ಅಭಿಪ್ರಾಯ ಪಟ್ಟರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿ ಪ್ರದಾನದ ಅಂಗವಾಗಿ ನವಂಬರ್ 17 ರಂದು ನಡೆದ ಕಾರಂತ ನೆನಪು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತಾಡುತ್ತಿದ್ದರು.

ಕಾರಂತರು ಯಕ್ಷಗಾನ ರಂಗದಲ್ಲಿ ಮಾಡಿರುವ ಬದಲಾವಣೆಗಳು ಸೈದ್ಧಾಂತಿಕ ನೆಲೆಯಲ್ಲಿ ಗಟ್ಟಿಯಾಗಿದ್ದವು. ಅವರು ರೂಪಿಸಿದಂತಹ ದೃಷ್ಟಿಕೋನವನ್ನು ಕಲಾವಿದರು ಅರ್ಥೈಸಿ ಅನುಷ್ಠಾನಕ್ಕೆ ತರಬೇಕೆಂದು ಕಾರಂತರು ಬಯಸಿದ್ದರು ಎಂದು ಪ್ರೊ. ಸಾಮಗರು ಹೇಳಿದರು.

ಶಿವರಾಮ ಕಾರಂತರ ವ್ಯಕ್ತಿತ್ವದಲ್ಲಿ ನಮ್ಮನ್ನು ಸೆಳೆಯುವ ಕಾಂತ ಶಕ್ತಿ ಇತ್ತು. ಉಡುಪಿಯಲ್ಲಿ ಯಕ್ಷಗಾನ ಕೇಂದ್ರವನ್ನು ಸ್ಥಾಪಿಸಿ ಸಾಂಸ್ಕೃತಿಕವಾಗಿ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಪ್ರೊ. ಸಾಮಗ ಅವರು ಹೇಳಿದರು.

ಯಕ್ಷಗಾನ ಗುರು ಶ್ರೀ ಬನ್ನಂಜೆ ಸಂಜೀವ ಸುವರ್ಣ ಅವರು ಶಿವರಾಮ ಕಾರಂತ ನೆನಪು ಕಾರ್ಯಕ್ರಮದಲ್ಲಿ ಕಾರಂತರ ವ್ಯಕ್ತಿತ್ವ ಹಾಗೂ ಯಕ್ಷಗಾನಕ್ಕೆ ಅವರು ನೀಡಿದ ಕೊಡುಗೆ ಕುರಿತು ಮಾತಾಡಿದರು.

ಸಮಾರಂಭದಲ್ಲಿ ಭಾಗವಹಿಸಿದ ಉಡುಪಿಯ ಮಾಜಿ ಶಾಸಕ ಶ್ರೀ ಯು. ಆರ್. ಸಭಾಪತಿ ಅವರು ಕಾರಂತರು ಒಬ್ಬ ಅದ್ವಿತೀಯಾ ವ್ಯಕ್ತಿ; ಅದ್ಭುತವಾದ ಕಲಾವಿದ ಎಂದು ಬಣ್ಣಿಸಿದರು. ಕಾರಂತರು ಯಕ್ಷಗಾನದಲ್ಲಿ ಸಂಶೋಧನೆ ಮಾಡಿ ಬ್ಯಾಲೆ ನೃತ್ಯರೂಪಕ ತಯಾರಿಸಿದರು ಎಂದರು. ಸಾಂಪ್ರದಾಯಿಕ ಯಕ್ಷಗಾನವನ್ನು ಬಿಟ್ಟು, ಹೊಸ ಆವಿಷ್ಕಾರದೊಂದಿಗೆ ನೃತ್ಯ ರೂಪಕವನ್ನು ತಂದಾಗ ಯಕ್ಷಗಾನದ ನೈಜ ಸ್ವರೂಪವನ್ನು ಕೆಡಿಸಿದ್ದಾರೋ ಎನ್ನುವಂತಹ ಪ್ರಶ್ನೆ ಬಂತು. ಆದರೆ ಕಾರಂತರು ತಮ್ಮ ವಿಶೇಷ ಪ್ರಯತ್ನದಿಂದ ಯಕ್ಷಗಾನವನ್ನು ವಿಶ್ವಮಟ್ಟಕ್ಕೆ ಪರಿಚಯಿಸಿದರು ಎಂದು ಶ್ರೀ ಸಭಾಪತಿ ಅವರು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಮಾತಾಡುತ್ತಾ, ಶಿವರಾಮ ಕಾರಂತರು ಜನಸಾಮಾನ್ಯರ ನಡುವೆ ಇದ್ದ ಮಹಾನ್ ಸಾಹಿತಿ ಎಂದರು. ಎಲ್ಲಾ ವರ್ಗದ ಜನರಿಗೆ ಮೆಚ್ಚುಗೆಯಾಗುವಂತಹ ಯಕ್ಷಗಾನ ಕಲೆಯನ್ನು ಜನಸಮುದಾಯದ ಶಕ್ತಿಯನ್ನಾಗಿ ಕಾರಂತರು ಮಾಡಿದರು ಎಂದು ಅವರು ನುಡಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರಂತ ನೆನಪು ಕಾರ್ಯಕ್ರಮದ ಮೂಲಕ ಶಿವರಾಮ ಕಾರಂತರ ಕೊಡುಗೆಗಳನ್ನು ಗೌರವಿಸಿದಂತಾಗುತ್ತದೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಸ್ವಾಗತಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಎಚ್.ಸಿ. ಹೇಮಲತಾ ಅವರು ವಂದನಾರ್ಪಣೆ ಮಾಡಿದರು. ಖಜಾಂಚಿ ಡಾ. ವೈ. ಅವನೀಂದ್ರನಾಥ್ ರಾವ್ ಕಾರ್ಯಕ್ರಮ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮವಾಗಿ ಚಿತ್ತಾವರ ಮಹಿಳಾ ಯಕ್ಷಗಾನ ಮಂಡಳಿ, ಬೆಂಗಳೂರು ಇವರಿಂದ ನರಕಾಸುರ ಮೋಕ್ಷ ಯಕ್ಷಗಾನ ಪ್ರದರ್ಶನಗೊಂಡಿತು. ಅ

*ಅಭಿಮತ ವರದಿ*



# ಕಾರಂತ ನೆನಪು-ವಿಶೇಷ ಉಪನ್ಯಾಸ

ದೆಹಲಿ ಕರ್ನಾಟಕ ಸಂಘವು ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ನೀಡಿದ ಸಂದರ್ಭದಲ್ಲಿ ಕಾರಂತ ನೆನಪು ಉಪನ್ಯಾಸವನ್ನು **ಶ್ರೀ ಬನ್ನಂಜೆ ಸಂಜೀವ ಸುವರ್ಣ**ರಿಂದ ಏರ್ಪಡಿಸಿತ್ತು. **ಡಾ. ಶಿವರಾಮ ಕಾರಂತರ** ನಿಕಟ ಒಡನಾಡಿಯಾಗಿ ಮತ್ತು ಯಕ್ಷಗಾನ ಕೇಂದ್ರದ ಗುರು, ಪ್ರಾಂಶುಪಾಲರಾಗಿ ಶ್ರೀ ಸುವರ್ಣ ಅವರು ಕಾರಂತರ ನೆನಪನ್ನು ಮಾಡಿದ್ದಾರೆ. ಅಪೂರ್ವವಾದ ಉಪನ್ಯಾಸದ ಆಯ್ದ ಭಾಗವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದೇವೆ.



ಶಿವರಾಮ ಕಾರಂತರ ಬಗ್ಗೆ ಎಲ್ಲಿ ಆರಂಭಿಸಿ ಎಲ್ಲಿ ಮುಕ್ತಾಯಗೊಳಿಸಲಿ ಎಂಬುದೇ ಗೊಂದಲ. ಈ ಸಮಾಜದಲ್ಲಿ ಕಾರಂತರಂಥವರು ಈ ಕಾಲಘಟ್ಟದಲ್ಲಿ ಬಹಳ ಅಗತ್ಯವಾಗಿ ಬೇಕಿತ್ತು. ಬಹಳ ಹಿಂದಿನ ಕಾಲದಲ್ಲಿಯೇ ತನ್ನ ಜನಿವಾರವನ್ನು ತೆಗೆದಿಟ್ಟು ಇಡೀ ಸಮುದಾಯವನ್ನು ಜನಿವಾರದಲ್ಲಿ ಕಟ್ಟಲು ಪ್ರಯತ್ನ ಮಾಡಿದಂತಹವರು ಶಿವರಾಮ ಕಾರಂತರು. ಅಂತಹವರಲ್ಲಿ ನಾನೊಬ್ಬ. ಜೀವನವಿಡೀ ನಾನು ಇನ್ನೊಬ್ಬರ ಮನೆಯಲ್ಲಿ ಕೆಲಸ ಮಾಡಿ ದುಡಿದು ಕೊಂಡು ಬದುಕಿದವನು. ಎರಡನೇ ತರಗತಿಯಲ್ಲಿ ಮೂರು ತಿಂಗಳು ಶಾಲೆಗೆ ಹೋಗಿದ್ದೆ. ಆದರೆ ನೀವು ನನ್ನನ್ನು ಕಾಣುವುದಕ್ಕೆ, ಈ ವೇದಿಕೆ ಹತ್ತುವುದಕ್ಕೆ ಮೂಲ ಕಾರಣ ಕಾರಂತರ ಜತೆಗೆ ನನಗುಂಟಾದ ಸಂಪರ್ಕವಾಗಿದೆ. ನನ್ನ ಜೀವನದ ಉದ್ದಕ್ಕೂ ಇಪ್ಪತ್ತೊಂದು ಗುರುಗಳ ಮನೆಯಲ್ಲಿ ಕೆಲಸ ಮಾಡುವಾಗ ನೂರಾರು ತೊಂದರೆಗಳನ್ನು ಅನುಭವಿಸಿದ್ದೇನೆ. ಹಲವಾರು ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಬಂದಂತಹ ಗುರುಗಳ ಮನೆತನಗಳು. ಇವೆಲ್ಲವನ್ನೂ ನಿಭಾಯಿಸಿಕೊಂಡು, ಓದನ್ನು ಕಲಿಯದೇ ಒಂದು ಕಲಾಕ್ಷೇತ್ರದಲ್ಲಿ ಇಷ್ಟೊಂದು ಉನ್ನತ ಸ್ಥಾನ ಸಿಗಬೇಕಾದರೆ ಅದಕ್ಕೆ ನನ್ನ ಎಲ್ಲಾ ಹಿರಿಯ ಗುರುಗಳು ಕಾರಣ.

ಜಾತಿಯನ್ನು ಒಂದೆಡೆ ತಳ್ಳಿ, ಬರೇ ನೀತಿಯನ್ನು ಇಟ್ಟುಕೊಂಡು ಮುಂದಕ್ಕೆ ಹೇಗೆ ಬದುಕಬೇಕು ಎಂಬುದನ್ನು ನಾನು ನನ್ನ ಹಿರಿಯ ಗುರುಗಳಿಂದ ಕಲಿತು ಕೊಂಡಿದ್ದೆ. ಎಲ್ಲಾ ಜಾತಿಯ ಗುರುಗಳಿದ್ದರು. ಗುರುಗಳನ್ನು ಒಲಿಸಿಕೊಳ್ಳುವುದು ಶಿಷ್ಯನ ಕರ್ತವ್ಯವಾಗಿರುತ್ತದೆ. ಕೆಲವು ಗುರುಗಳ ಮನೆಯಲ್ಲಿ ಊಟಮಾಡಿ ಅವರ ಸಂಪ್ರದಾಯಗಳನ್ನು ಚಾಚೂ ತಪ್ಪದೇ ಕೊನೆಗೆ ಅವರ ಜತೆಯಲ್ಲಿಯೇ ಊಟಮಾಡುವಂತಹ ವ್ಯವಸ್ಥೆಯನ್ನು ನಾನು ನನ್ನ ನಡೆನುಡಿಗಳಿಂದ ಮಾಡಿಕೊಂಡವನು. ನಾವು ಯಾವಾಗಲೂ ನಮ್ಮಿಂದ ಉನ್ನತದಲ್ಲಿರುವವರ ಹಾಗೆ ಆಗಲು ಪ್ರಯತ್ನಿಸಬೇಕು. ಎಲ್ಲಾ ವಿಚಾರದಲ್ಲಿ ಕೆಳಗಿರುವ ನಾವು ಮೇಲಿನವರನ್ನು ಕೆಳಗೆ ಬನ್ನಿ ಅಂತ ಹೇಳಲು ಆಗುವುದಿಲ್ಲ. ಅವರು ಯಾವ ರೀತಿಯಲ್ಲಿ ಮೇಲೆ ಹೋಗಿದ್ದಾರೆ, ನಾನು ಕೂಡ ಆ ರೀತಿಯಲ್ಲಿ ಮೇಲೆ ಹತ್ತ ಬೇಕು. ಮೆಟ್ಟಿಲು ಹತ್ತಿ ಅವರ ಹತ್ತಿರ ಕುಳಿತುಕೊಳ್ಳಬೇಕು ಎನ್ನುವಂತಹ ಪ್ರಯತ್ನವನ್ನು ನಾನು ಮಾಡಿದ್ದೇನೆ. ಇದು ನನ್ನ ಸ್ವಂತ ಅನುಭವ.

ಶಿವರಾಮ ಕಾರಂತರನ್ನು ನಾನು ಸುಮಾರು 1971ರಿಂದ ದೂರದಿಂದ ನೋಡುತ್ತಿದ್ದೆ. ಕಾರಂತರ ಸಂಪರ್ಕ 1982ರಿಂದ ನನಗೆ ಬಹಳ ಹತ್ತಿರದಿಂದಾಯ್ತು. ಅವರ ಯಕ್ಷರಂಗ ಇಟೆಲಿಗೆ ಹೋದಂತಹ ಸಂದರ್ಭದಲ್ಲಿ ರಿಹರ್ಸಲ್ ನಡೆಯುತ್ತಿತ್ತು. ಆ ವರ್ಷ ಉಡುಪಿಯಲ್ಲಿ ನೆರೆ ಬಂದಂತಹ ದಿನ. ನಾವು ಎಲ್ಲೆಲ್ಲಿಯೋ ದಾರಿ ಬದಿಯಲ್ಲಿರುವವರು. ನಮಗೆ ಮನೆ ಅಂತ ಇರಲಿಲ್ಲ. ಮನೆಯಿಲ್ಲದೇ ಬೆಳೆದ ಹುಡುಗ ನಾನು. ಆ ದಿವಸ ನಾನು ಬಹಳ ತಡವಾಗಿ ಕ್ಲಾಸಿಗೆ ಹೋದೆ. ನಾನು ಒಳಗೆ ಹೋಗುವುದಕ್ಕಿಂತ ಮೊದಲೇ ಕಾರಂತರು ಕ್ಲಾಸು ಆರಂಭ ಮಾಡಿ ಆಗಿತ್ತು. ನಾನು ಹೋಗುತ್ತಿದ್ದಂತೆ ಹತ್ತಿರವಿದ್ದ ಕು.ಶಿ. ಹರಿದಾಸ ಭಟ್ಟರು ನನ್ನನ್ನು ದೂರದಿಂದಲೇ ನೋಡಿದವರು 'ಅಲ್ಲೇ ನಿಲ್ಲು' ಅಂದರು. 'ಒಳಗೆ ಬರಬೇಡ' ಅಂದರು. ಕಾರಂತರು ರಿಹರ್ಸಲ್ ಮಾಡಲು ಪ್ರಾರಂಭಿಸಿದರೆ ನಂತರ ಯಾರನ್ನೂ ನೋಡುವುದಿಲ್ಲ. ಮಧ್ಯದಲ್ಲಿ ಬಂದವರಿಗೆ ಪೆಟ್ಟೇ ಗತಿ! ಕೊನೆಗೆ ಹರಿದಾಸ ಭಟ್ಟರು ಅಂದರು 'ಇವನು ಯಕ್ಷರಂಗಕ್ಕೆ ಹೊಸ ಸೇರ್ಪಡೆ.' ಕಾರಂತರು 'ಸಮಯ ಪ್ರಜ್ಞೆ ಇಲ್ಲವೇ ಇವನಿಗೆ. ಮನೆಗೆ ಹೋಗಲು ಹೇಳಿ' ಅಂದರು. ಒಂದೇ ಮಾತು. ನನಗೆ ಏನು ಮಾಡಬೇಕೆಂದು ತೋಚದಾಯಿತು. ಅಲ್ಲಿಯೇ ನೀಲಾವರ ರಾಮಕೃಷ್ಣ ಎಂಬ ಗುರುಗಳಿದ್ದರು. ನನ್ನನ್ನು

ಕುಳಿತುಕೊಳ್ಳಿಸಿದರು. ರಿಹರ್ಸಲ್ ಮುಗಿದ ಮೇಲೆ ಬೈರಾಸಿನಿಂದ ತಲೆಯುಜ್ಜಿ, ತಲೆಬಾಚಿದರು.

ಕಾರಂತರು ನನ್ನನ್ನು ನೋಡಿದರು. 'ಏನು ತಡವಾಯಿತು' ಎಂದರು. ನನ್ನ ವಿಷಯವನ್ನು ತಿಳಿಸಿದೆ. 'ನಾಳೆಯಿಂದ ಬಾ' ಅಂತಂದರು. ಪ್ರಾರಂಭವಾಯಿತು. ಅವರೊಟ್ಟಿಗೆ ಹತ್ತಿಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದವರು ಇದ್ದರು. ಅವರು ನನ್ನ ಕೆಲಸಗಳನ್ನು ಕ್ರಮೇಣ ನೋಡುತ್ತಾ ಒಂದು ದಿವಸ ಕೇಳಿದರು. 'ಏನು? ಏನು ಮಾಡುತ್ತಾ ಇದ್ದಿ?' ಅದಕ್ಕೆ ನಾನೆಲ್ಲವನ್ನೂ ಹೇಳಿದೆ. 'ಅದೆಲ್ಲಾ ಬೇಡ ನಿನ್ನ ಹೆಸರೇನು?' 'ಸಂಜೀವ ಪೂಜಾರಿ' 'ಹೌದಾ ಪೂಜೆ ಮಾಡುವವನೋ?'ಅಂತ ಕೇಳಿದರು. ನಾನು ಮಾತೇ ಆಡಲಿಲ್ಲ. ಅವರನ್ನು ನೋಡುವಾಗಲೇ ನಾವೆಲ್ಲಾ ಹೆದರುವವರು. ಕಡೆಗೆ ಮರುದಿವಸ ಬಂದವರು 'ನಿನ್ನ ಸರ್‌ನೇಮ್ ಏನು?' ಅಂತ ಕೇಳಿದರು. ನನಗೆ ಸರ್‌ನೇಮ್ ಅಂದರೆ ಏನು ಅಂತ ಗೊತ್ತಿರಲಿಲ್ಲ. ಆ ಪದದ ಅರ್ಥವೇ ಗೊತ್ತಿರಲಿಲ್ಲ. ನಾನು ಸುಮ್ಮಗಾದೆ. 'ನಿಮ್ಮ ಬಳಿ ಯಾವುದು?' ಅಂದರು. ನನಗೆ ಅದೂ ಗೊತ್ತಿರಲಿಲ್ಲ. ಮನೆಯವರ ಸಂಪರ್ಕ ಮಾಡಿ ನಾನು ಸುವರ್ಣ ಅಂತಂದೆ. 'ಹಾಗಾದರೆ ನಿನ್ನನ್ನು ಸಂಜೀವ ಸುವರ್ಣ ಅಂತ ಕರೆಯುವ' ಅಂತಂದರು. 'ನಿನ್ನನ್ನು ಸಂಜೀವ ಪೂಜಾರಿ ಅಂತ ಕರೆಯಲಿಕ್ಕೆ ಇಷ್ಟವಿಲ್ಲ' ಅಂತಂದರು. ಅವರು ಹಾಗೆ ಯಾಕೆ ಹೇಳಿದರು ಎಂದು ಈ ಘಳಿಗೆವರೆಗೂ ನನಗೆ ಅರ್ಥ ಆಗಲಿಲ್ಲ. ಕಾರಂತರು ಈ ಪೂಜಾರಿಯನ್ನು ಎಷ್ಟು ಅಪ್ಪಿ ಕೊಂಡರೆಂದರೆ ಕೊನೆಯ ವರೆಗೂ ತನ್ನ ಮಗನ ಹಾಗೆ ನನ್ನನ್ನು ಬೆಳೆಸಿಕೊಂಡರು. ನಮ್ಮಲ್ಲಿ ಕಲಾರಾಧನೆ ಇದ್ದರೆ, ಕಲೆಯೊಂದು ವ್ಯಕ್ತಿಯನ್ನು ಎಷ್ಟು ಎತ್ತರಕ್ಕೆ ಕೊಂಡು ಹೋಗುತ್ತದೆ ಎಂಬುದಕ್ಕೆ ನಾನೇ ಉದಾಹರಣೆ.

ಒಂದು ದಿವಸ ನಾನು ಶಿವರಾಮ ಕಾರಂತರ ಮನೆ ಸುಹಾಸಕ್ಕೆ ಹೋಗಿ ಕಲಾವಿದರಿಗೆಲ್ಲ ಸಂಬಳ ಕಮ್ಮಿಯಾಗ್ತದೆ, ಅದಕ್ಕೆ ನೀವು ಏನಾದರು ಪ್ರಯತ್ನ ಪಟ್ಟರೆ ಮಾಡಬಹುದಿತ್ತು ಎಂದು ಹೇಳಿದೆ. ಅವರು 'ಸರಕಾರದಿಂದ ನಾನು ಬೇಡಲಿಕ್ಕೆ ಆಗುವುದಿಲ್ಲ, ನನ್ನತ್ರ ಏನಾದರೂ ಇದ್ದರೆ ಕೊಡ್ತೇನೆ, ಬೇಡಲಿಕ್ಕೆ ಹೋಗುವುದಿಲ್ಲ' ಅಂತಂದರು. ಮರುದಿವಸ ಯಕ್ಷಗಾನ ಕೇಂದ್ರಕ್ಕೆ ಬಂದವರೇ ಎಲ್ಲಾ ಕಲಾವಿದರನ್ನು ಕರೆಯಿಸಿ ಅವರ ಸಮಸ್ಯೆಗಳನ್ನು ಕೇಳಿದರು. ಒಬ್ಬೊಬ್ಬರು ಒಂದೊಂದು ಸಮಸ್ಯೆಯನ್ನು ಹೇಳಿದರು. 'ನನ್ನ ಜತೆ ಕೆಲಸ ಮಾಡಿದ ಕಲಾವಿದರಿಗೆ ಪ್ರತಿವರ್ಷ ಏನಾದರೂ ಕೊಡ್ತೇನೆ' ಅಂತ ಭರವಸೆ ನೀಡಿದರು. ಅದೇ ಪ್ರಕಾರ 1989ರಲ್ಲಿ ಪ್ರಥಮವಾಗಿ ನನಗೆ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಅಂದಿನ ಐಸಿಡಿಎಸ್ ಬ್ಯಾಂಕ್‌ನಲ್ಲಿ ನನ್ನ ಹೆಸರಲ್ಲಿಟ್ಟು ನನ್ನನ್ನು ಅವರ ಮನೆಗೆ ಕರೆದರು. ನಾನು ಮನೆಗೆ ಹೋಗಿ ಹೇಳಿದೆ 'ನಾನು ನನಗಾಗಿ ಕೇಳಿದ್ದಲ್ಲ' ಎಂದು. 'ಗೊತ್ತು ನೀನು ನಿನಗಾಗಿ ಕೇಳಿದ್ದಲ್ಲ. ಯಾವತ್ತೂ ದುಡ್ಡಿನ ಹಿಂದೆ ಹೋಗುವ ಪ್ರಯತ್ನ ಮಾಡಬಾರದು. ದುಡ್ಡು ನಿಮ್ಮ ಹಿಂದೆ ಬರುವ ಹಾಗೆ ಪ್ರಯತ್ನ ಪಡಬೇಕು. ಆದರೆ ನಾನು ಇದನ್ನು ಯಾಕೆ ಕೊಡ್ತಾ ಇದ್ದೇನೆ ಎಂದರೆ ಅದು ನಿನ್ನ ಕಲಾಪ್ರೌಢಿಮೆಗೆ. ಮತ್ತೆ ನೀನು ಅದನ್ನು ಪ್ರೀತಿಸುತ್ತಾ ಇದ್ದಿ. ಆ ನೆಲೆಯಿಂದ ನಾನು ಕೊಡ್ತಾ ಇದ್ದೇನೆ. 1951ರಿಂದ ನಾನು ಯಕ್ಷಗಾನದಲ್ಲಿ ಕೆಲಸ ಮಾಡ್ತಾ ಇದ್ದೇನೆ ನಿನ್ನ ಹಾಗೆ ನನಗೆ ಒದಗಿದವರು ಯಾರೂ ಇಲ್ಲ. ಇದನ್ನು ನೀನು ಇಟ್ಟುಕೊಳ್ಳಬೇಕು' ಎಂದು ಹೇಳಿ ಅವರು ಕೊಟ್ಟರು.

ಮತ್ತೆ ಕಾರಂತರದ್ದು ಗಡಸುತನ. ಕಡಲ ತಡಿಯ ಭಾರ್ಗವ ಅಂತ ಅವರನ್ನು ಕರೆಯುತ್ತೇವೆ. ಇಲ್ಲಿ ದೂರದರ್ಶನಕ್ಕೆ ಒಂದು ಸಲ ನಾವು ಬಂದಿದ್ದೆವು. ಕಾರಂತರ ಯಕ್ಷರಂಗದ ರಿಹರ್ಸಲ್ ನಡೆಯುತ್ತಿತ್ತು. ರಿಹರ್ಸಲ್ ಆದ ಮೇಲೆ ರೆಕಾರ್ಡಿಂಗ್ ಮಾಡುತ್ತಿದ್ದರು. ಕಾರಂತರು ಯಾವ ರೀತಿಯಲ್ಲಿ ರಿಹರ್ಸಲ್ ಮಾಡಿದರೋ ಅದು ರೆಕಾರ್ಡ್ ಆಗುವಾಗ ಸರಿಯಾಗಿ ಬರುತ್ತಿರಲಿಲ್ಲ. ಗುರುಗಳು (ಕಾರಂತರು) ಬಂದು ನಮಗೆ ಚೆನ್ನಾಗಿ ಬೈದು ಹೋದರು. 'ನೀವು ನನ್ನ ಎದುರಿಗೊಂದು ರೀತಿ ಮಾಡ್ತೀರಿ. ಅವರು ಟೇಕ್ ಆಫ್ ಮಾಡುವಾಗ ಇನ್ನೊಂದು ರೀತಿ ಮಾಡ್ತೀರಿ. ಚೆನ್ನಾಗಿ ಬರ್ತಾ ಇಲ್ಲ' ಅಂತ ಹೇಳಿದರು. ಆದರೆ ಯಾರೂ ಮಾತಾಡುತ್ತಿರಲಿಲ್ಲ. ಕೊನೆಯ ವರೆಗೂ ಕಾರಂತರ ಜತೆಗೆ ಮಾತಾಡುವ ಧೈರ್ಯ ಯಾರಿಗೂ ಬರಲಿಲ್ಲ. ಆದರೆ ನಾನು ಎಲ್ಲಾ ಬಾವಿಯ ನೀರು ಕುಡಿದುದರಿಂದ ಗುರುಗಳ ಜತೆ ಮಾತಾಡಲು ಭಯ ಇರಲಿಲ್ಲ. ನಾನು ಸೀದಾ ಹೋದೆ. 'ಹ್ಞಾಂ .. ಏನು?' ಎಂದರು. 'ನೀವು ರಿಹರ್ಸಲ್ ಮಾಡುವಾಗ ನೀವು ಹೇಳಿ ಕೊಡುವಾಗ ರೆಕಾರ್ಡ್ ಮಾಡುವ ಕ್ಯಾಮರಾಮನ್‌ಗಳು ಚಾ ಕುಡಿಯಲು ಹೋಗಿರ್ತಾರೆ. ನಾವು ಎಲ್ಲಿ ಹೇಗೆ ಕುಣಿತೇವೆ ಅಂತ ಅವರಿಗೆ ಗೊತ್ತಾಗುವುದಿಲ್ಲ. ನಾವು ಎಲ್ಲಿ ಯಾವ ಪೋಸ್‌ನಲ್ಲಿರಬೇಕು, ಅಲ್ಲಿಗೆ ಯಾವ ಲೈಟಿಂಗ್ ಕೊಡಬೇಕು ಎಂದು ಕ್ಯಾಮರಮನ್‌ಗಳಿಗೆ ಅದು ಗೊತ್ತಾಗದೇ, ನಾವು ಕುಣಿಯುವಾಗ ಮುಖವನ್ನು ತೋರಿಸ್ತಾರೆ, ಮಾತಾಡುವಾಗ ಕಾಲುಗಳನ್ನು ತೋರಿಸ್ತಾರೆ' ಅಂತ ನಾನು ಹೇಳಿದೆ. ಕಾರಂತರು ಎಲ್ಲಾ ಕ್ಯಾಮರಮನ್‌ಗಳನ್ನು ಕರೆಸಿ ಮತ್ತೆ ರಿಹರ್ಸಲ್ ಮಾಡಿ ಮತ್ತೆ ಅಲ್ಲಿ ಪ್ರದರ್ಶನ ಮಾಡಿದರು. ಈ ಮಾತನ್ನು ಯಾಕೆ ಹೇಳ್ತೇನೆ ಅಂದರೆ, ಎಷ್ಟೇ ಸಣ್ಣ ಹುಡುಗ ಬಂದು ತನ್ನ ಒಪ್ಪಿಗೆಯ ಮಾತನ್ನು ಹೇಳಿದರೂ ಕೂಡಾ ಅದನ್ನು ಒಪ್ಪಿಕೊಂಡು ಅದರ ಬಗ್ಗೆ ನೇರವಾದ ನಿರ್ಧಾರವನ್ನು ಕೈಗೊಳ್ಳುವವರು ಶಿವರಾಮ ಕಾರಂತರು.

> **ನನ್ನನ್ನು ದೂರದಿಂದಲೇ ನೋಡಿದವರು 'ಅಲ್ಲೇ ನಿಲ್ಲು, ಒಳಗೆ ಬರಬೇಡ' ಅಂದರು. ಕಾರಂತರು ರಿಹರ್ಸಲ್ ಮಾಡಲು ಪ್ರಾರಂಭಿಸಿದರೆ ನಂತರ ಯಾರನ್ನೂ ನೋಡುವುದಿಲ್ಲ. ಮಧ್ಯದಲ್ಲಿ ಬಂದವರಿಗೆ ಪೆಟ್ಟೇ ಗತಿ! ಈ ಸಮಾಜದಲ್ಲಿ ಕಾರಂತರಂಥವರು ಈ ಕಾಲಘಟ್ಟದಲ್ಲಿ ಬಹಳ ಅಗತ್ಯವಾಗಿ ಬೇಕಿತ್ತು.**

ಇಂತಹ ಕತೆಗಳು ತುಂಬಾ ನಡೆದಿವೆ. ನಮ್ಮಲ್ಲಿ ಬೆಲಕಲ್ ಸುಬ್ಬಣ್ಣ ಅಂತ ಒಬ್ಬ ಕಡು ಬಡವ ಕಲಾವಿದರಿದ್ದರು. ಕಾರಂತರಿಗೆ ಗೊತ್ತಿತ್ತು. ಒಂದು ಸಲ ನಾನು ಕಾರಂತರ ಮನೆಗೆ ಹೋಗಿ 'ಹೀಗೊಬ್ಬ ಕಲಾವಿದ ಇದ್ದಾನೆ' ಅಂತಂದೆ. 'ಹೌದಾ? ಬರಲಿಕ್ಕೆ ಹೇಳು. ತಿಂಗಳಿಗೆ 250 ರೂಪಾಯಿ ನಾನು ಕೊಡುತ್ತೇನೆ' ಅಂದರು. ಅವರು ಆ ಕಾಲದಲ್ಲಿ ಸುಮಾರು ಎರಡು ಮೂರು ಸಾವಿರ ಕಲಾವಿದರಿಗೆ ಮನಿಯಾರ್ಡರ್ ಮಾಡುತ್ತಿದ್ದರು. ಅವರು ಯಾವ ದೇಶದಲ್ಲಿಯೇ ಇರಲಿ, ಎಲ್ಲಿಯೇ ಇರಲಿ ಒಂದನೇ ತಾರೀಖಿಗೆ ಆ ದುಡ್ಡು ಕಲಾವಿದರ ಮನೆ ತಲುಪುತ್ತಿತ್ತು.

ನಮ್ಮಲ್ಲೊಬ್ಬ ದಲಿತ ಮದ್ದಳೆ ಚೆಂಡೆ ಮಾಡಲು ಚರ್ಮಗಳನ್ನೆಲ್ಲಾ ಯಕ್ಷಗಾನ ಕೇಂದ್ರಕ್ಕೆ ತರುತ್ತಿದ್ದ. ಅವನು ಬಹಳ ಕಾಯಿಲೆಯಿಂದ ಬಿದ್ದ. ಒಂದು ಸಲ ಕಾರಂತರು ರಿಹರ್ಸಲ್‌ಗೆ ಬರುವಾಗ ಚರ್ಮ ಹಿಡಿದುಕೊಂಡು ಬಂದು ನಿಂತಿದ್ದಾನೆ. 'ಇವ ಯಾವ ಕೇರಿಯವ?' ಅಂತ ಕೇಳಿದರು ಗುರುಗಳು. 'ನಮಗೆ ಕೇಂದ್ರಕ್ಕೆ ಚರ್ಮ ತಂಡು ಕೊಡುವವ' ಎಂದೆ. ನಾವು ರಿಹರ್ಸಲ್ ಶುರು ಮಾಡಿದೆವು. ಆದರೆ ಆ ಪುಣ್ಯಾತ್ಮ ಕಾರಂತರಿಗೆ ಕೈ ಮುಗಿದು ಎಂಟೂವರೆಯಿಂದ ಹನ್ನೊಂದು ಗಂಟೆವರೆಗೆ ಅಂದರೆ ಕಾರಂತರು ಹೋಗುವವರೆಗೆ ಬಾಗಿಲ ಬಳಿಯಲ್ಲಿಯೇ ನಿಂತು ಕೊಂಡಿದ್ದ. ಕಾರಂತರು ಕುಣಿಯುವುದನ್ನು ನೋಡಿಕೊಂಡಿದ್ದ. ಕಾರಂತರು ಕೊನೆಗೆ ಮೆಲ್ಲನೆ ಅವನಲ್ಲಿಗೆ ಬಂದು ಎಲ್ಲ ವಿಷಯವನ್ನು ಕೇಳಿದರು. ಅವರ ಸಂಪ್ರದಾಯಗಳು, ಡೋಳಿನ ಬಗ್ಗೆಯೆಲ್ಲಾ ಕೇಳಿದರು. ಕಡೆಗೆ ಮೆಲ್ಲ ಕಿಸೆಗೆ ಕೈ ಹಾಕಿ 'ಇಗೋ ಇದು ಇಷ್ಟು ಉಂಟು. ಸುವರ್ಣನಲ್ಲಿ ಹೇಳ್ತೇನೆ. ಆ ದಿವಸ ಬಾ' ಅಂತ ಹೇಳಿದರು. ಕೆಲವು ದಿವಸಗಳು ಕಳೆದು ಹೋದ ಮೇಲೊಂದು ದಿನ ಕಾರ್ಡು ಬರೆದು ಹಾಕಿದರು. 'ಕೇಂದ್ರದಲ್ಲಿ ಸಿಕ್ಕಿದ ಗುರುವನನ್ನು ಮನೆಗೆ ಕರೆದುಕೊಂಡು ಬಾ' ಎಂದು. ಆತನನ್ನು ಕರೆದುಕೊಂಡು ನಾನು ಹೋದಾಗ ಅವರು ಆತನಿಗೆ ಮೂರು ಸಾವಿರ ರೂಪಾಯಿ ನಗದು ನೀಡಿ 'ಇದು ಕಳ್ಳು ಕುಡಿಯಲು ಅಲ್ಲ, ನೀನು ಚೆನ್ನಾಗಿರುವ ಬಟ್ಟೆ ಬರೆಗಳನ್ನು ಉಟ್ಟುಕೋ. ನಿನಗೆ ಇನ್ನೇನಾದರೂ ಸಮಸ್ಯೆ ಇದ್ದರೆ ನನಗೆ ಹೇಳು' ಎಂದರು. ಇದು ಯಾರು ಮಾಡುತ್ತಾರೆ. ಇಂತಹ ಗುಣ ಯಾರಿಗಿದೆ. ಇಂತಹ ಸಂದರ್ಭದಲ್ಲಿ ಕಾರಂತರನ್ನು ನಾವು ನೆನೆಯಲೇ ಬೇಕು.

ದೆಹಲಿ ಕರ್ನಾಟಕ ಸಂಘವು ಕೊಟ್ಟ ಈ ಸನ್ಮಾನವು ನನ್ನ ಯೋಗ್ಯತೆಗಿಂತಲೂ ಮೀರಿದ ಸನ್ಮಾನ. ಕಾರಂತರು ಈಗ ಇದ್ದಿದ್ದರೆ ಏನಾಗುತ್ತಿತ್ತು ಎನ್ನುವ ಯೋಚನೆಯಲ್ಲಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಅ

*ನಿರೂಪಣೆ: ಬಾಲಕೃಷ್ಣ ನಾಯ್ಕ್ ಡಿ.*

# ಶಿವದೇಶ ಸಂಚಾರದ ಎರಡು ಹಿಂದಿ ನಾಟಕಗಳು





ಶರಣದ ಸಂದೇಶವನ್ನು ಹಿಂದಿ ನಾಟಕ ಪ್ರದರ್ಶನಗಳ ಮೂಲಕ ದೇಶದಾದ್ಯಂತ ಪ್ರಸಾರ ಮಾಡುತ್ತಿರುವ ಚಿತ್ರದುರ್ಗ ಜಿಲ್ಲೆ ಸಾಣೇಹಳ್ಳಿಯ ಶಿವಕುಮಾರ ಕಲಾ ಸಂಘದ ನಾಟಕದ ತಂಡದ ಕಲಾವಿದರಿಂದ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ಮರಣ್ ಹೀ ಮಹಾನವಮಿ' ಮತ್ತು 'ಮೈ ಬಾವರಿ ಚೆನ್ ಕೀ' ಎಂಬ ಎರಡು ಹಿಂದಿ ನಾಟಕಗಳನ್ನು ನವೆಂಬರ್ 20 ಮತ್ತು 21 ರಂದು ಪ್ರದರ್ಶಿಸಲಾಯಿತು.

ಶಿವಕುಮಾರ ಕಲಾ ಸಂಘವು ಶಿವ ದೇಶ ರಂಗಯಾತ್ರೆಯ ಅಭಿಯಾನದ ಪ್ರಯುಕ್ತ ದೇಶದ ಸುಮಾರು 18 ರಾಜ್ಯಗಳಲ್ಲಿ ಈ ಎರಡು ನಾಟಕಗಳನ್ನು ಪ್ರದರ್ಶಿಸುತ್ತಿದೆ. ಈ ಎರಡೂ ನಾಟಕಗಳನ್ನು ಶ್ರೀ ಶಿವಕುಮಾರ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮೀಜಿ ಅವರು ರಚಿಸಿದ್ದಾರೆ.

ಶಿವಶರಣೆ ಅಕ್ಕಮಹಾದೇವಿಯವರು ಕಥೆಯನ್ನು ಹೊಂದಿರುವ ಮೈ ಬಾವರಿ ಚೆನ್ನಾ ಕೀ ನಾಟಕವನ್ನು ಗಿರೀಶ್ ದೋಬಾಲ್ ಅವರು ನಿರ್ದೇಶಿಸಿದ್ದಾರೆ. ಖ್ಯಾತ ನಿರ್ದೇಶಕ ಕೆ.ಜಿ. ಕೃಷ್ಣಮೂರ್ತಿ ಅವರು ಮರಣ್ ಹೀ ಮಹಾನವಮಿ ನಾಟಕವನ್ನು ನಿರ್ದೇಶಿಸಿದ್ದಾರೆ.

ಜಾತಿ ಭೇದವನ್ನು ತಿರಸ್ಕರಿಸುವ ಬಸವಣ್ಣನವರ ಪ್ರಚಲಿತ ಸರಳಯ್ಯನ ಮುಖ್ಯ ಅಖ್ಯಾನವನ್ನು ಈ ನಾಟಕವು ಹೊಂದಿದೆ. ಅಂತರ್‌ಜಾತಿ ಮದುವೆ, ಅದರಿಂದ ಉದ್ಭವಿಸುವ ಸಮಸ್ಯೆಗಳು ಮತ್ತು ಅವುಗಳಿಗೆ ಶರಣರು ಕಂಡು ಹಿಡಿದ ಪರಿಹಾರವನ್ನು ಈ ನಾಟಕದಲ್ಲಿ ಕಾಣಬಹುದು.

ಅಸಮಾನತೆ ವಿರುದ್ಧ ಹೋರಾಡಿದ ಶಿವಶರಣರ ಸಂದೇಶ ಕನ್ನಡಿಗರಿಗೆ ಮಾತ್ರ ಸೀಮಿತವಾಗಬಾರದು. ಅದು ಕನ್ನಡೇತರರಿಗೂ ತಲುಪಬೇಕು ಎಂಬ ಉದ್ದೇಶದಿಂದ ಈ ಪ್ರವಾಸ ಏರ್ಪಡಿಸಲಾಗಿದೆ ಎಂದು ನಾಟಕ ತಂಡದ ಮಾರ್ಗದರ್ಶಿ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಈ ಸಂದರ್ಭದಲ್ಲಿ ತಿಳಿಸಿದರು.

ಹಿಂದಿ ಭಾಷೆಯಲ್ಲಿ ಶರಣರ ಕುರಿತು ಪ್ರೇಕ್ಷಕರಿಗೆ ಮಾಹಿತಿ ನೀಡಿದ ರಾಜ್ಯದ ಮಾಜಿ ಡಿಜಿಪಿ ಶ್ರೀ ಅಜಯ್‌ಕುಮಾರ್ ಸಿಂಗ್ ಅವರು ಮಾತನಾಡಿ ಇದೊಂದು ಉತ್ತಮ ಕಾರ್ಯ, ಶರಣರ ಸಂದೇಶ ಹಿಂದಿ ನಾಟಕಗಳ ಮೂಲಕ ತಲುಪುತ್ತಿರುವುದು ಸಂತೋಷದ ವಿಷಯ ಎಂದರು.

ಹಿರಿಯ ರಂಗಕರ್ಮಿ, ಪ್ರವಾಸದ ಪ್ರಧಾನ ಸಂಚಾಲಕ ಶ್ರೀನಿವಾಸ ಜಿ. ಕಪ್ಪಣ್ಣ ಅವರು ನಾಟಕ ತಂಡದ ಈ ಕಾರ್ಯವು ಭಾರತೀಯ ರಂಗಭೂಮಿ ಇತಿಹಾಸದಲ್ಲಿ ಒಂದು ದಾಖಲೆ ಎಂದು ಬಣ್ಣಿಸಿದರು. ಸಾಮಾನ್ಯ ಬಸ್ ಮೂಲಕ 12 ರಾಜ್ಯಗಳಲ್ಲಿ ಪ್ರವಾಸ ಮಾಡುತ್ತ 72 ಸ್ಥಳಗಳಲ್ಲಿ ನಾಟಕ ಪ್ರದರ್ಶನ ಎಂದರೆ ಸಾಹಸದ ಕೆಲಸ ಎಂದರು. ಸಂಚಾರದ ಸಂಚಾಲಕ ಎಚ್.ಎಸ್. ದ್ಯಾಮೇಶ್ ಪ್ರವಾಸ ಅನುಭವಗಳನ್ನು ಹಂಚಿಕೊಂಡರು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಉಪಸ್ಥಿತರಿದ್ದರು. ಶ್ರೀ ಎನ್.ಪಿ. ಚಂದ್ರಶೇಖರ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಅ

***ಅಭಿಮತ ವರದಿ***

# ಮರೆತರೂ ಮರೆಯಲಾಗದ ಅನಭಿಜ್ಞ ಶಾಕುಂತಲ

ಕವಿ, ನಾಟಕಕಾರ ಕೆ. ವೈ. ನಾರಾಯಣಸ್ವಾಮಿ ಅವರು ಕವಿ ಕಾಳಿದಾಸನ ಬದುಕು ಮತ್ತು ನಾಟಕ ಕಾವ್ಯಗಳನ್ನು ಸುಂದರವಾಗಿ ಹೆಣೆದ ದೇಶದಾದ್ಯಂತ ಮೂವತ್ತಕ್ಕಿಂತಲೂ ಹೆಚ್ಚು ಪ್ರದರ್ಶನಗಳನ್ನು ಕಂಡ 'ಅನಭಿಜ್ಞ ಶಾಕುಂತಲ'ವನ್ನು ಬೆಂಗಳೂರಿನ ಪ್ರಸಂಗ ತಂಡದವರು ಇದೇ ಡಿಸೆಂಬರ್ 1 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಪ್ರಸ್ತುತ ಪಡಿಸಿದರು.

ನಾಟಕಗಳು ಸಾಂಪ್ರದಾಯಿಕವಾಗಿ ವಿಘ್ನನಿವಾರಕನಿಗೆ ವಂದಿಸಿ ಆರಂಭಗೊಂಡರೆ ಇಲ್ಲಿ ಸ್ವತಃ ಗಣನಾಯಕನೇ ತನಗೆ ಅಗ್ರಪೂಜೆಯಾಗಬೇಕೆಂದು ಬಂದು ನಟರಿಂದ ನಿಂದನೆಯ ವಂದನೆಯನ್ನು ಪಡೆದು ಹೋಗುತ್ತಾನೆ. ನಾಟಕದ ಕಥೆ ಆರಂಭಗೊಳ್ಳುವುದಕ್ಕಿಂತ ಮುಂಚೆಯೇ ಕಾಳಿದಾಸನು ಕೊಲೆಯಾಗಿ ಸತ್ತ ಸುದ್ದಿ ಬರುತ್ತದೆ. ನಟರೆಲ್ಲರೂ ನಾಟಕಕಾರನ ಅಂತಿಮ ದರ್ಶನಕ್ಕೆ ತೆರಳಿದರೆ, ಸೂತ್ರಧಾರ ಕನ್ನಡಿಯೊಳಗಿನಿಂದ ಬಂದು ನ್ಯಾಯಾಧೀಶನ ವೇಷ ತೊಟ್ಟು ಕೊಲೆಯಾಗಿದ್ದ ಕಾಳಿದಾಸನ ಬಳಿಯಿದ್ದ ಹೆಂಗಸಿನ ಬಳಿ ಬರುತ್ತಾನೆ. ಅಲ್ಲಿ ಮತ್ತಿಬ್ಬರು ಮುಸುಕುದಾರಿಗಳನ್ನು ಭಟರು ಹಿಡಿದು ತರುತ್ತಾರೆ. ಮುಸುಕು ಕಳಚಿದಂತೆ ನಾಟಕದ ಕಥೆಯೂ ಅನಾವರಣಗೊಳ್ಳುತ್ತದೆ.

ಮುಸುಕು ಧರಿಸದಿದ್ದರೂ ಗೋಪ್ಯವಾಗಿರುವ ಪಾತ್ರದ ಅನಾವರಣವನ್ನು ನಾಟಕಕಾರರು ಕುತೂಹಲಕಾರಿಯಾಗಿ ಮಾಡುತ್ತಾರೆ. ಹಾಡಿಯ ನಾಯಕನ ಸೊಸೆಗೆ ಕಾಳಿದಾಸನಲ್ಲಿ ವ್ಯಾಮೋಹವಾಗುತ್ತದೆ. ಅವರಿಬ್ಬರು ಸಂಧಿಸುವಾಗ ಆಕೆ ತಾನೊಬ್ಬ ಗಂಧರ್ವ ಕನ್ಯೆ ಎಂದು ಅವನಿಗೆ ಹೇಳುತ್ತಾಳೆ. ಅವನ ಪ್ರೀತಿಗಾಗಿ ಪ್ರತಿ ಹುಣ್ಣಿಮೆಗೆ ಕಾಯುತ್ತಾಳೆ. ಇಲ್ಲಿ ನಾಟಕಕಾರರು 'ಕುಮಾರ ಸಂಭವ', 'ಮೇಘದೂತ', 'ವಿಕ್ರಮೋರ್ವಶಿಯಾ'ಗಳನ್ನು ತಂದಿಡುತ್ತಾರೆ. ಸೆರೆಮನೆಯಲ್ಲಿರುವ ಕಾಳಿದಾಸನ ಬಿಡುಗಡೆಯಾಗುತ್ತದೆ. ಮೂವರು ಕನ್ಯೆಯರ ಪ್ರೇಮ ಪಾಶದಲ್ಲಿ ಬಿದ್ದಿರುವ ಕಾಳಿದಾಸನ ಬದುಕು ತಾನು ರಚಿಸಿರುವ ನಾಟಕಗಳ ನಡುವೆ ಮೇಳೈಸುತ್ತದೆ. ಗಂಧರ್ವ ಕನ್ಯೆಯ ಉಂಗುರವನ್ನು ಕಾಳಿದಾಸ ಮರೆಯುತ್ತಾನೆ. ಕಥೆ ಈಗ 'ಅಭಿಜ್ಞಾನ ಶಾಕುಂತಲ'ದತ್ತ ತಿರುಗುತ್ತದೆ. ಕೊಲಂಬೋ ನಗರದ ನಾಗಸಾನಿಯ ಮನೆಯಲ್ಲಿ ಶಾಕುಂತಲ ನಾಟಕವನ್ನು ಕಾವ್ಯೋನ್ಮಾದದಲ್ಲಿ ಪಠಿಸುತ್ತಿರುವ ಕಾಳಿದಾಸನ ಕೊಲೆಯಾಗುತ್ತದೆ. ತನ್ನ ಪ್ರಿಯಕರನನ್ನು ಕಾಣಲು ಬಂದ ಹಾಡಿಯ ನಾಯಕನ ಸೊಸೆ ಅಂದರೆ ಗಂಧರ್ವ ಕನ್ಯೆ ತನ್ನ ಪ್ರೇಮದ ಕೊಲೆಯಾದುದು ತಮಗಿಬ್ಬರಿಗೆ ಹುಟ್ಟಿದ ಮಗನಿಂದಲೇ ಎಂದು ತಿಳಿದು ಮೂಕವಿಸ್ಮಿತಳಾಗುತ್ತಾಳೆ. ಪ್ರಿಯಕರ ಮತ್ತು ಮಗ ಇಬ್ಬರಲ್ಲಿ ಯಾರನ್ನು ಉಳಿಸಬೇಕೆಂಬ ಪ್ರಶ್ನೆಯನ್ನು ಚೆಲ್ಲಿ ಬಿಡುತ್ತಾಳೆ. ಅನಭಿಜ್ಞ ಶಾಕುಂತಲೆಯಾಗುತ್ತಾಳೆ.

ನಿರ್ದೇಶಕ ಪ್ರಕಾಶ್ ಪಿ. ಶೆಟ್ಟಿ ಅವರು ಬಹಳಷ್ಟು ಸಂಕೀರ್ಣತೆ ಹಾಗೂ ರಂಗ ಸವಾಲುಗಳಿರುವ ಈ ಕೃತಿಯನ್ನು ಕೈಗೆತ್ತಿಕೊಂಡು ಸಹ ನಿರ್ದೇಶಕ ವೇಣಿ ನೇಪೋಲಿಯನ್ ಜತೆ ಸೇರಿ ಪ್ರತಿ ದೃಶ್ಯದಲ್ಲಿಯೂ ಕಾಳಿದಾಸನ ಕಾವ್ಯದಲ್ಲಿರುವ ಪ್ರೇಮದ ಉತ್ಕಟತೆಯನ್ನು ಪ್ರೇಕ್ಷಕರ ಮನದಾಳಕ್ಕೆ ಇಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಂಗದಲ್ಲಿ ನಟಿಸಿದ ಪ್ರತಿಯೊಬ್ಬ ಕಲಾವಿದನೂ ರಂಗಶಿಸ್ತಿನಿಂದ ತನ್ನ ನಟನೆಯ ಕೌಶಲ್ಯವನ್ನು ನಾಟಕದ ಗಂಭೀರತೆ ಹಾಗೂ ಭಾವನಾತ್ಮಕತೆಗಳಿಗೆ ಸರಿಹೊಂದಿಸಿ ಪ್ರೇಕ್ಷಕನು ನಾಟಕದ ಉದ್ದಕ್ಕೂ ಕಣ್ಣೆವೆ ತೆರೆದು ಕುಳಿತುಕೊಳ್ಳುವಂತೆ ಮಾಡಿದರು. ಹಿರಿಯ ನಟಿ ಗೀತಾ ಸುರತ್ಕಲ್ ಅವರು ಗಂಧರ್ವ ಕನ್ಯೆಯಾಗಿ ತಮ್ಮ ಪ್ರೌಢ ಅಭಿನಯವನ್ನು ಮತ್ತೊಮ್ಮೆ ಈ ನಾಟಕದಲ್ಲಿ ಮೆರೆದಿದ್ದಾರೆ.

ಕೃಷ್ಣ ರಾಯಚೂರು ಮತ್ತು ಜಿ.ಬಿ.ರಾಮಕೃಷ್ಣ ಅವರು ನಿರ್ಮಿಸಿರುವ ಈ ನಾಟಕದ ರಂಗ ವಿನ್ಯಾಸಕಾರ ಬಿ. ವಿಠಲ್ ಅವರ ಸರಳ ಆದರೆ ಪರಿಣಾಮಕಾರಿಯಾದ ರಂಗವಿನ್ಯಾಸದಲ್ಲಿ ಕನ್ನಡಿಯೊಂದು ಮಾಯಾದರ್ಪಣವಾಗಿದೆ. ರಂಗದಲ್ಲಿ ವರ್ತಮಾನ ಮತ್ತು ಇತಿಹಾಸಗಳು ನಿರಾಂತಕವಾಗಿ ಬದಲಾಗಿವೆ.

ನಂದಕಿಶೋರ ಅವರ ಬೆಳಕಿನ ವಿನ್ಯಾಸದಲ್ಲಿ ಮೂಡಿ ಬಂದ ಹುಣ್ಣಿಮೆಯ ಬೆಳದಿಂಗಳು, ಚಂದ್ರ, ಬಾನಿನಲ್ಲಿ ತೇಲುವ ನಕ್ಷತ್ರಗಳು ರಂಗದ ಮೇಲೆ ದೃಶ್ಯಕಾವ್ಯವನ್ನು ಹೆಣೆಯುವಲ್ಲಿ ಮುಖ್ಯಭೂಮಿಕೆಯನ್ನು ವಹಿಸಿದವು. ಕಾಶ್ಮೀರಾದ ಚೆಲುವನ್ನು ಸೆರೆಹಿಡಿದು ಪಾತ್ರಗಳ ಆಂಗಿಕ ಭಾವಗಳಿಗೆ ಪೂರಕವಾಗಿದ್ದ ಎನ್. ಮಂಗಳಾ ಅವರ ವಸ್ತ್ರವಿನ್ಯಾಸ ನಾಟಕದ ಮತ್ತೊಂದು ಪ್ರಮುಖ ಹೆಗ್ಗಳಿಕೆ. ಹಾಡಿಯ ಮುಗ್ದೆಯೊಬ್ಬಳು ಗಂಧರ್ವ ಕನ್ಯೆಯಾಗಿ ರಂಗದ ಮೇಲೆ ಬರುವ ದೃಶ್ಯವೊಂದರಲ್ಲಿ ವಸ್ತ್ರವಿನ್ಯಾಸ, ಬೆಳಕು, ರಂಗಸಜ್ಜಿಕೆ, ಸಂಗೀತ, ಅಭಿನಯ, ನೃತ್ಯ ಸಂಯೋಜನೆ ಎಲ್ಲವೂ ಪರಿಣಾಮಕಾರಿಯಾಗಿ ಬಂದು ನಾಟಕದ ಉತ್ಕೃಷ್ಟ ಭಾಗವಾಗಿ ಕಂಡುಬಂದಿದೆ.

ನಾರಾಯಣ ರಾಯಚೂರು ಅವರು ಸಂಗೀತದಲ್ಲಿ ಹೊಸ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಕ್ಲಾಸಿಕಲ್ ಸಂಗೀತಕ್ಕೆ ಜಾನಪದ ಸಂಗೀತವನ್ನು ಸೇರಿಸಿದ ಅವರು ಆ ಮೂಲಕ ಪ್ರೇಕ್ಷಕರ ಮೇಲೆ ಹೊಸ ಪರಿಣಾಮ ಬೀರುವಲ್ಲಿ ಯಶಸ್ವಿಯಾಗಿದ್ದಾರೆ. ರಾಮಚಂದ್ರ ಹಡಪದ ಅವರ ಗಾಯನ ಒಟ್ಟು ನಾಟಕದ ಕಾವ್ಯಾತ್ಮಕತೆಯನ್ನು ಭಾವಾತ್ಮದತ್ತ ಯಶಸ್ವಿಯಾಗಿ ಕೊಂಡೊಯ್ದಿದೆ.

ಒಟ್ಟಿನಲ್ಲಿ ಉತ್ತಮ ರಂಗ ಕೃತಿಯೊಂದು ರಂಗದ ಮೇಲೆ ಅಷ್ಟೇ ಉತ್ತಮವಾಗಿ ಮೂಡಿ ಬಂದಿದೆ.

ಕನ್ನಡಿಯೇ ಮಾಯಾ ಕನ್ನಡಿಯೇ,
ದರ್ಪಣವೇ ಮಾಯಾ ದರ್ಪಣವೇ...

ಪ್ರೇಕ್ಷಕನು ರಂಗಮಂದಿರದಿಂದ ಹೊರ ಹೊರಟಾಗ ತನ್ನೊಡನೆ ಕೊಂಡು ಹೋದುದೇನು ಎಂದರೆ ಒಂದು ಸುಂದರ ಅನುಭವವನ್ನು, ಮುಂದಿನ ಹಲವು ನಾಳೆಗಳಿಗೆ. ಅ

*ಬಾಲಕೃಷ್ಣ ನಾಯ್ಕ್ ಡಿ.*



# ರಾಜ್ಯೋತ್ಸವದ ಅಂಗವಾಗಿ ಸಾಹಿತ್ಯ ಯಾತ್ರೆ


















ರಾಜ್ಯೋತ್ಸವದ ಅಂಗವಾಗಿ ದೆಹಲಿಯ ಸ್ಥಳೀಯ ಕನ್ನಡ ಕಲಾವಿದರು ‘ಕನ್ನಡ ಸಾಹಿತ್ಯ ಯಾತ್ರೆ’ ಸಾಂಸ್ಕೃತಿಕ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನವೆಂಬರ್ 24ರಂದು ಪ್ರದರ್ಶಿಸಿದರು.

ಕನ್ನಡ ಸಾಹಿತ್ಯದ ಪ್ರಮುಖ ಕಾವ್ಯ, ನಾಟಕ ಮತ್ತು ಸಾಹಿತ್ಯಗಳನ್ನು ಬಿಂಬಿಸುವ ಈ ಕಾರ್ಯಕ್ರಮವನ್ನು ಸಿ.ಆರ್. ಪದ್ಮಶ್ರೀ ಅವರು ನಿರ್ದೇಶಿಸಿದರು. ಅವರಿಗೆ ದೂರದರ್ಶನದ ಹೆಚ್ಚುವರಿ ಮಹಾನಿರ್ದೇಶಕರಾದ ನಾಡೋಜ ಮಹೇಶ್ ಜೋಷಿ ಅವರು ಸ್ಮರಣಿಕೆ ಹಾಗೂ ಹೂಗುಚ್ಛ ನೀಡಿ ಗೌರವಿಸಿದರು.

ರತ್ತೋ ರತ್ತೋ: ಶಿವಾನಂದ ಇಂಗಳೇಶ್ವರ, ಡಾ. ಬಿ.ವಿ. ಅಡ್ಕೋಳಿ, ಜಯಶ್ರೀ ಕುಮಾರ್, ಭೂಮಿಕಾ, ಪುಷ್ಪ, ಅಂಕಿತಾ ದೇವ್, ಅನಿತಾ ದೇವ್, ಅಭಿಷೇಕ್, ಶರಣ್ಯ, ಕವನ, ರಕ್ಷಿತಾ, ಭುವನ್

ಮುನ್‌ಗುಂಡದ ಮಹೇಶ್ವರ: ಎಸ್. ಕುಮಾರ್, ನೇತ್ರಾವತಿ ಕುಮಾರ್, ಎಚ್.ಜಿ. ಶಿವರಾಮ್, ವೀರು, ಜಮುನಾ ಸಿ. ಮಠದ, ಮಂಜುಳಾ ನಾಗರಾಜ, ಲಕ್ಷ್ಮೀ ರಾಜ್‌ಕುಮಾರ್, ಆಶಾಲತಾ ಮಹದೇವ್, ಜ್ಯೋತಿ ಶಂಭು, ರಾಜೇಶ್ವರಿ ಪ್ರಕಾಶ್, ವಿನೋದ್, ರವಿಕುಮಾರ್

ಗೋರು ಗೋರುಖಾ : ಶೋಭಾ ನಾಗರಾಜ, ದೀಪ, ಮಂಜುಳಾ ನಾಗರಾಜ, ಜ್ಯೋತಿ ಶಂಭು, ವಿದ್ಯಾಭಟ್, ಗೀತಾ ದೇವರಾಜ್, ಲಕ್ಷ್ಮೀ ರಾಜ್‌ಕುಮಾರ್, ಶಕುಂತಲಾ ನಾಯಕ್

ಎಲ್ಲೋ ಜೋಗಪ್ಪ : ಆಶಾಲತಾ ಮಹದೇವ್, ಶಿವಪ್ಪ, ಹಾಡುಗಾರರು : ಎಸ್. ಕುಮಾರ್, ನೇತ್ರಾವತಿ ಕುಮಾರ್, ಜಮುನಾ ಸಿ. ಮಠದ

ಕೋಲಾಟ : ಎಚ್.ಜಿ. ಶಿವರಾಮ್, ವೀರು, ರಾಜ್‌ಕುಮಾರ್, ರೂಪಶ್ರೀ, ಜಯಶ್ರೀ ಬಸವರಾಜ್, ಸೀಮಾ, ಶಿಲ್ಪ, ಶೈಲ ಕುಮಾರ್

ಗಮಕ : ಜಮುನಾ ಸಿ. ಮಠದ ಮತ್ತು ಬಸವರಾಜ ಹುಂಡ್ರಿ

ದಾಸರು : ಪ್ರಕಾಶ್ ಯದ್ವಡ್ಕರ್, ರವಿಕುಮಾರ್, ಡಾ. ಬಿ.ವಿ. ಅಡ್ಕೋಳಿ, ಬಿ.ಎನ್. ಮೋಹನ್ ಕುಮಾರ್, ಸಂಗೀತ : ಎಸ್. ಕುಮಾರ್, ನೇತ್ರಾವತಿ ಕುಮಾರ್, ಜಮುನಾ ಸಿ. ಮಠದ

ಗೋನಾ ರಾಣಿ : ಎಚ್.ಜಿ. ಶಿವರಾಮ್,














ಮಂಜುಳಾ ನಾಗರಾಜ್
ನಿಮ್ಮ ಶರಣು : ತಾರಾ ರಮೇಶ್, ಜಯಶ್ರೀ ಬಸವರಾಜ್, ರಾಜೇಶ್ವರಿ ಪ್ರಕಾಶ್, ಶಿಲ್ಪ, ಶೈಲ ಕುಮಾರ್, ರವಿಕುಮಾರ್, ವಿನೋದ್, ಆಶಾಲತಾ ಮಹದೇವ್, ಶಿವನ ಪಾತ್ರದಲ್ಲಿ : ಕಲ್ಮೇಶ್ ರಾಚಾಚಾರಿ.
ಅಕ್ಕ ಕೇಳವ್ವ : ಸೀಮಾ, ಸವಿತಾ, ತಾರಾ ರಮೇಶ್, ಮಕ್ಕಳು : ಭೂಮಿಕಾ, ಶರಣ್ಯ, ಅನಿತಾ ದೇವ್, ಅಂಕಿತಾ ದೇವ್, ಶ್ವೇತಾ, ಕವನ, ಪುಷ್ಪ, ರಕ್ಷಿತಾ, ಶಿವನ ಪಾತ್ರದಲ್ಲಿ : ಆಕಾಶ್
ಕೋಡಗನ ಕೋಳಿ ನುಂಗಿತ್ತಾ : ರಾಜ್‌ಕುಮಾರ್, ತಾರಾ ರಮೇಶ್, ಎಚ್.ಜಿ. ಶಿವರಾಮ್, ರವಿಕುಮಾರ್, ಜಮುನಾ ಸಿ. ಮಠದ, ಆಶಾಲತಾ ಮಹದೇವ್, ಮಂಜುಳಾ ನಾಗರಾಜ್, ಶೈಲಾ ಕುಮಾರ್
ಕರುಣಾಳು ಬಾ ಬೆಳಕೆ : ಮಂಜುಳಾ ನಾಗರಾಜ, ಆಶಾಲತಾ ಮಹದೇವ್, ಎಸ್. ಕುಮಾರ್, ನೇತ್ರಾವತಿ ಕುಮಾರ್, ಮೋಹನ್ ಕುಮಾರ್, ರಾಜೇಶ್ವರಿ ಪ್ರಕಾಶ್, ಎಚ್.ಜಿ. ಶಿವರಾಮ್, ಜಮುನಾ ಸಿ. ಮಠದ, ಜ್ಯೋತಿ ಶಂಭು, ಜಯಶ್ರೀ ಬಸವರಾಜ್, ವಿನೋದ್, ರವಿಕುಮಾರ್, ತಾರಾ ರಮೇಶ್
ಹೆಂಡ ಹೆಂಡ್ತಿ : ಪ್ರಕಾಶ್ ಯದ್ವಡ್ಕರ್ ಮತ್ತು ಎಸ್. ಕುಮಾರ್
ಭರತನಾಟ್ಯ : ಐಶ್ವರ್ಯ ನಾಯಕ್ ಮತ್ತು ಸವಿತಾ
ಕುಣಿಯೋಣು ಬಾರಾ : ರಾಜೇಶ್ವರಿ ಪ್ರಕಾಶ್, ದೀಪ, ಶಿಲ್ಪ, ನಂದಿನಿ ಮಠದ, ಆಶಾಲತಾ ಮಹದೇವ್, ಶಿವಪ್ಪ, ವಿನೋದ್, ಜ್ಯೋತಿ ಶಂಭು, ಜಯಶ್ರೀ ಬಸವರಾಜ್
ರಾಯರು ಬಂದರು : ತಾರಾ ರಮೇಶ್, ಶಕುಂತಲಾ ನಾಯಕ್, ಸೀಮಾ, ವಿದ್ಯಾ ಭಟ್, ಕವನ, ಆಶಾದೇವ್, ಶೈಲ ಕುಮಾರ್
ಅಡುಗೆ ಮನೆ : ಲಕ್ಷ್ಮೀ ರಾಜ್‌ಕುಮಾರ್, ಸವಿತಾ, ಶಿಲ್ಪ, ಶೈಲ ಕುಮಾರ್, ಲೀಲಾ ದೇವರಾಜ್
ಲ್ಯಾಂಬ್ರೆಟಾ ವೆಸ್ಪಾ: ಐಶ್ವರ್ಯ ನಾಯಕ್ ಮತ್ತು ಸವಿತಾ
ಟಿ.ಪಿ. ಕೈಲಾಸಂ : ರವೀಂದ್ರ ಬೆಲ್ಲದ್, ಮೋಹನ್ ಕುಮಾರ್, ಬಸವಣ್ಣ ಹುಂಡ್ರಿ, ರವಿಕುಮಾರ್
ತುಘಲಕ್ : ವಿನೋದ್, ಮಿಥುನ್ ಶೆಟ್ಟಿ
ಮಲೆಗಳ ಘಟ್ಟಗಳು : ಡಾ. ಪುರುಷೋತ್ತಮ ಬಿಳಿಮಲೆ
ನನ್ನ ಜನಗಳು : ಎಸ್. ಕುಮಾರ್, ಎಚ್.ಜಿ. ಶಿವರಾಮ್, ನೇತ್ರಾವತಿ ಕುಮಾರ್, ಜಮುನಾ ಸಿ. ಮಠದ, ಮಂಜುಳಾ ನಾಗರಾಜ, ಜ್ಯೋತಿ ಶಂಭು, ಆಶಾಲತಾ ಮಹದೇವ್, ಗಿರೀಶ್, ಮೋಹನ್ ಕುಮಾರ್, ರಾಜೇಶ್ವರಿ ಪ್ರಕಾಶ್, ಜಯಶ್ರೀ ಬಸವರಾಜ್, ನರಸಿಂಹ ಮೂರ್ತಿ, ವೀರು, ಲಕ್ಷ್ಮೀ ರಾಜ್‌ಕುಮಾರ್, ಪದ್ಮಶ್ರೀ, ವಿನೋದ್, ರವಿಕುಮಾರ್, ತಾರಾ ರಮೇಶ್. ಅ





# ರಾಜ್ಯೋತ್ಸವ ಸಂದರ್ಭದಲ್ಲಿ ಮಕ್ಕಳ




ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸ್ಥಳಿಯ ಕನ್ನಡ ಮಕ್ಕಳ ಸಾಂಸ್ಕೃತಿಕ ಪ್ರತಿಭಾ ಪ್ರದರ್ಶನವನ್ನು ನವೆಂಬರ್ 30ರಂದು ನಡೆಸಲಾಯಿತು. ಸುಮಾರು ಎರಡು ವಾರಗಳ ಕಾಲ ಕೋರಿಯೊಗ್ರಾಫರ್ ತಿಲಕ್ ಪಿ. ಕೋಟ್ಯಾನ್ ಮತ್ತು ಸಂಜೀವ ಮೂರ್ತಿ (ಜೀವ) ಅವರಿಂದ ತರಬೇತಿ ಪಡೆದ ದೆಹಲಿಯ ಮಕ್ಕಳು ವಿವಿಧ ಮನೋರಂಜನ ಕಾರ್ಯಕ್ರಮಗಳನ್ನು ಸಂಘದ ಸಭಾಂಗಣದಲ್ಲಿ ಪ್ರಸ್ತುತ ಪಡಿಸಿದರು.

ಕುಮಾರಿ ಅನನ್ಯ ಹಾಗೂ ಶಂಕರ ಅವರಿಂದ ಗಣೇಶವಂದನೆ ಮತ್ತು ಕುಮಾರಿ ಐಶ್ವರ್ಯ ಹಾಗೂ ಕುಮಾರಿ ಸಿಂಚನಾ ಅವರ ನೃತ್ಯದೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ವಿವಿಧ ನೃತ್ಯಗಳ ಪ್ರದರ್ಶನವೂ ನಡೆಯಿತು.

ಕುಲಕುಲವೆಂದು ಹೊಡೆದಾಡದಿರು ಎಂಬ ಕನಕದಾಸರ ಸಂದೇಶವನ್ನು ಅಭಿಲಾಷ್, ಆಕಾಶ್, ಜಸ್ವಂತ್, ಕಲ್ಮೇಶ್, ಪ್ರಶಾಂತ್, ಲಿಖಿತ್ ವೇದಿಕೆಯ ಮೇಲೆ ನೃತ್ಯರೂಪದಲ್ಲಿ ತೋರಿಸಿದರು. ಭಸ್ಮಾಸುರ ಮೋಹಿನಿ ನೃತ್ಯವನ್ನು ಕು. ಅನನ್ಯಾ ಹಾಗೂ ಕು. ರಮ್ಯಾ ಅವರು ಮಾಡಿದರು. ಕು. ಪ್ರೇರಣಾ ಸುಪ್ರಸಿದ್ಧಗಿಲಿ ಗಿಲಿ ಗಿಲ್ಲಕಾ ಪದ್ಯವನ್ನು ಹಾಡಿ ಜನರನ್ನು







# ಸಾಂಸ್ಕೃತಿಕ ಪ್ರತಿಭಾ ಪ್ರದರ್ಶನ







ರಂಜಿಸಿದರು. ದೊಡ್ಡವರೆಲ್ಲ ಜಾಣರಲ್ಲ ಚಿಕ್ಕವರೆಲ್ಲ ಕೋಣರಲ್ಲ ಎಂಬ ಇನ್ನೊಂದು ಜನಪ್ರಿಯವಾದ ಹಾಡಿಗೆ ಲಕ್ಷ್ಯ, ಭುವನ್, ನವಯುಗ, ಅಭಿಷೇಕ್, ಮಯೂರ್, ಶಾಶ್ವತ್, ಕ್ಷಿತಿಜ್, ಋತ್ವಿಕ್ ಅವರು ನೃತ್ಯದ ಮೂಲಕ ಜೀವ ತುಂಬಿದರು.

ಸಣ್ಣ ಪುಟಾಣಿಗಳ ತಂಡದಲ್ಲಿದ್ದ ಅಮಿತ, ಅಂಕಿತ, ಶ್ವೇತಾ, ಐಶ್ವರ್ಯ, ಸೌಂದರ್ಯ, ರಾಜೇಶ್ವರಿ, ರಮ್ಯಾ, ಶರಣ್ಯ ಅವರು ನಾಗಾಲ್ಯಾಂಡ್‌ನ ಆದಿವಾಸಿಗಳ ವಿಶಿಷ್ಟ ನೃತ್ಯವನ್ನು ಪ್ರಸ್ತುತಪಡಿಸಿದರು.

ಪಿಲ್ಲಂಗೋಪಿಯ ಚೆಲುವ ಕೃಷ್ಣನ ಹಾಡಿಗೆ ಪುಟ್ಟ ವಾಸುಕಿಯ ಕೃಷ್ಣನ ಹುಡುಕಾಟ ನೃತ್ಯ ಜನರ ಮನಸೂರೆಗೊಂಡಿತು. ಶಿವನು ಭಿಕ್ಷೆಗೆ ಬಂದ ಹಾಡನ್ನು ಭೂಮಿಕಾ, ರಕ್ಷಿತಾ, ಪುಷ್ಪ, ಲಕ್ಷ್ಯ, ಅನನ್ಯ, ಕವನ, ಪೃಥ್ವಿ ನೃತ್ಯರೂಪದಲ್ಲಿ ಪ್ರಸ್ತುತ ಪಡಿಸಿದರು.

ಗಲ್ಲು ಗಲ್ಲೆನುತ ಎಂಬ ಹಾಡಿಗೆ ಅಮಿತ, ಅಂಕಿತ, ಶ್ವೇತಾ, ಕಲ್ಮೇಶ್, ಆಕಾಶ್, ಪ್ರಶಾಂತ್, ಜಸ್ವಂತ್, ನಂದಿನಿ ಮಠದ್ ಕೋಲಾಟ ನೃತ್ಯ ಪ್ರಸ್ತುತ ಪಡಿಸಿದರು. ಕೊನೆಗೆ ಎಲ್ಲಾ ಮಕ್ಕಳು ಸೇರಿ ಸಮೂಹ ನೃತ್ಯವನ್ನು ಮಾಡಿದರು.

ಇದೇ ಸಂದರ್ಭದಲ್ಲಿ ರಂಗಮಂಟಪ ಕಲಾವಿದರು, ಬೆಂಗಳೂರು ಇವರಿಂದ ರಂಗಗೀತೆಗಳ ಕಾರ್ಯಕ್ರಮವೂ ನಡೆಯಿತು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀಮತಿ ಆಶಾ ಶ್ಯಾಮಸುಂದರ್ ಮತ್ತು ಶ್ರೀಮತಿ ಪೂರ್ಣಿಮಾ ಗೌಡ ಅವರು ನಿರೂಪಿಸಿದರು.

ಕೊರಿಯೊಗ್ರಾಫರ್‌ಗಳಾದ ತಿಲಕ್ ಪಿ. ಕೋಟ್ಯಾನ್ ಮತ್ತು ಸಂಜೀವ ಮೂರ್ತಿ (ಜೀವ) ಅವರಿಗೆ ಸಂಘದ ಸ್ಮರಣಿಕೆ ಮತ್ತು ಹೂಗುಚ್ಛ ನೀಡಿ ಅಭಿನಂದಿಸಲಾಯಿತು. ಅ

# ನಾಟಕ ಹೃದಯದ ಹೂವಾದರೆ-ಕವನ ಭಾವದ ಹಣ್ಣು.

ಸುಮಾರು ಐದು ದಶಕಗಳ ಕಾಲ ದೆಹಲಿಯಲ್ಲಿ ಕನ್ನಡ ನಾಟಕ ರಂಗದಲ್ಲಿ ತೊಡಗಿದ ನನಗೆ ಕವನ ರಚಿಸುವುದರಲ್ಲಿ ರುಚಿ ಬೆಳೆದು ಬಂದಿದೆ. ನಾನು ಬರೆದ ನಾಟಕಗಳಲ್ಲಿಯ ಕೆಲವು ಸನ್ನಿವೇಶಗಳಿಗೆ ಕವನಗಳನ್ನು ರಚಿಸಿರುವೆ. ಸ್ಫೂರ್ತಿ ಬಂದಾಗ ಕವನಗಳ ರಚನೆಯಾಗುವುದು ಸ್ವಾಭಾವಿಕ. ಆಗ ಅಂತರಂಗದ, ನಮ್ಮ ಮನಸ್ಸಿನ ಮಾತುಗಳನ್ನು ಬರೆಯಬಹುದು.

ಕಾವ್ಯದ ವಿಷಯ ಏನೇ ಇರಲಿ, ಕಾವ್ಯಾತ್ಮಕ ಭಾಷೆಯಲ್ಲಿ, ಓದುಗರಿಗೆ ರುಚಿಸುವಂತೆ ಹೇಳುವುದು ಕಾವ್ಯದ ಮುಖ್ಯ ಕಾರ್ಯ. ಕಲೆ ಹೃದಯದ ಹೂವಾದರೆ ಕವನ ಭಾವದ ಹಣ್ಣು. ಕಲೆ ಹೃದಯದ ಸೃಷ್ಟಿಯಾದರೆ ಕಾವ್ಯ ಭಾವದ ದೃಷ್ಟಿ. ಭಾವನೆಯ ಕಲಾತ್ಮಕ ಅಭಿವ್ಯಕ್ತಿಯೇ ಕಾವ್ಯ. ಕಾವ್ಯ ಶೂನ್ಯದಲ್ಲಿ ಹುಟ್ಟಲಾರದು, ಬೆಳೆಯಲಾರದು. ಈ ನನ್ನ ಅನಿಸಿಕೆಗಳ ಭಾವನೆಯ ಬಳ್ಳಿ ಬೆಳೆಯಲು ಹೆಸರಾದ ಹಿರಿಯ ಕವಿಗಳ ಕೃತಿಗಳಲ್ಲಿ ನಾನು ಕಂಡ ಮಾರ್ಗ. ಅವರ ಕೃತಿಗಳಿಂದ ಕಲಿತೆ. ನಿಸರ್ಗದ ಅಂತರಂಗದಲ್ಲಿ, ಸಾಮಾಜಿಕ ಜೀವನಗಳ ಆವರಣದಲ್ಲಿ, ಬದುಕಿನ ಅಂಗಳದಲ್ಲಿ, ಬಾಳಿನ ಹಾದಿಯಲ್ಲಿ, ಕವಿಯ ಸಹಜ ಸ್ಪಂದನ ಸ್ವಭಾವದಿಂದಾಗಿ, ಆತನಲ್ಲಿ ಅಂಕುರಿಸುವ ಅನಿಸಿಕೆಗಳು ಆತನ ಸೃಜನಶೀಲತೆಯ ಪ್ರತೋಲವಾಗುತ್ತವೆ.

ಸುಖದ ದಿನಗಳು ಸಂಸಾರದ ಗುಹೆಯೊಳಗೆ ಸೇರಿ ಹೊರ ಬರುವಾಗ ಕಾಲ ಗತಿಸುತ್ತದೆ. ಒಂದು ಮಿತಿಯಲ್ಲಿ ಕಾವ್ಯ ವ್ಯಕ್ತಿತ್ವದ ಹುಡುಕಾಟವೂ ಹೌದು. ಹರಯದ ದಿನಗಳು ಮಾನವ ಜೀವನದ ಅಮೃತ ಕಾಲ, ಮನ ಮಿಡಿತದ ಸುವರ್ಣ ಕಾಲ. ಆರೋಗ್ಯವಂತ ಯುವಕ ಯುವತಿಯರ ಜೀವನ ವಸಂತಗಳನ್ನು ಸುಂದರ ಕನಸುಗಳನ್ನಾಗಿ ಪರಿವರ್ತಿಸಿಕೊಂಡು ಭಾವಪರವಶರಾಗುವ ಕಾಲ. ಇವೆಲ್ಲ ನಮ್ಮ ಜೀವನದಲ್ಲಿ ಪದೇ ಪದೇ ಅನುಭವಕ್ಕೆ ಬರುತ್ತವೆ.

ನನ್ನ ಜೀವನದಲ್ಲಿ ಕಾಲಕಾಲಕ್ಕೆ ದಾಂಪತ್ಯ ಜೀವನದಲ್ಲಿ ಘಟಿಸುವ ಮಧುರ ಕ್ಷಣಗಳನ್ನು ಶೃಂಗಾರ ಸೌಧದಲ್ಲಿ ಹಿಡಿದಿರುವ ಪ್ರಯತ್ನವಿದೆ. ಮನಮುಟ್ಟುವ, ಮನ ತಟ್ಟುವ, ಅಂತರಂಗವನ್ನು ಚೆಲುವಿನ ವಿರಳ ಸ್ಪಂದನಗಳನ್ನು ಉಳಿಸಿ ಪೋಷಿಸುವ ಪ್ರಯತ್ನ. ನಮ್ಮ ಸ್ವಭಾವದಲ್ಲಿ ಇರುತ್ತದೆ. ಇದಕ್ಕೆ ಕಾವ್ಯವೇ ಅಭಿವ್ಯಕ್ತಿಯಾಗಬಲ್ಲುದೆಂದು ನಂಬಿದ್ದೇನೆ ಮತ್ತು ಕವನಗಳಲ್ಲಿಯ ತಿರುಳನ್ನು ನಿರಂತರ ಸವಿಯುತ್ತ ನಾವು ಆನಂದ ಪಡುವೆವೆಂದು ನಂಬಿದ್ದೇನೆ. ಇಗೋ ನನ್ನ ಜೀವನದಲ್ಲಿ ಘಟಿಸುವ ನಿಜ ಘಟನೆಗಳ ಬಳ್ಳಿಯಿಂದ ಕೆಲವು ಸನ್ನಿವೇಶಗಳು.

ದೆಹಲಿಯಲ್ಲಿ ಡಿಸೆಂಬರ್ ತಿಂಗಳಿಂದ ಚಳಿ ಪ್ರಾರಂಭವಾಗುವುದು. 1955ರಲ್ಲಿ ಮದುವೆ ಆಗಿ ಹೆಂಡತಿಯನ್ನು ಬಿಜಾಪುರದಿಂದ ದೆಹಲಿಗೆ ಕರಕೊಂಡು ಬಂದೆ. ಆಗ ಒಂದು ಬಾಡಿಗೆಯ ರೂಮಿಯಲ್ಲಿ ನಮ್ಮ ಸಂಸಾರ. ಬೆಳಿಗ್ಗೆ ಎದ್ದು ಚಳಿಯಲ್ಲಿ ಸ್ನಾನ ಮಾಡಿ, ತಿಂಡಿ ತಿಂದು, ಸಾಯಿಕಲ್ ಓಡಿಸುತ್ತ 9 ಗಂಟೆಗೆ ಆಫೀಸ್ ಸೇರಬೇಕು. ಅಷ್ಟು ಬೇಗ ವಿಪರೀತ ಚಳಿಯಲ್ಲಿ ಸ್ನಾನ ಮಾಡುವುದು ಕಷ್ಟದ ಕೆಲಸವಾಗಿತ್ತು. ನನ್ನ ಮನೆ ಮಾಲಕ ಸರದಾರ್‌ಜಿ. ಅವನು ದಿನಾಲು ಬೇಗ ಟಿಪ್‌ಟಾಪ್ ಆಗಿ ದಾಡಿ, ಮೀಸೆ, ಗಡ್ಡ ತೀಡಿಕೊಂಡು ತಯಾರಾಗುತ್ತಿದ್ದ. ಆದರೆ ರವಿವಾರ ಹಾಲಿಡೆ-ಅಂದು ಗಡ್ಡಮೀಸೆ ಉದ್ದ ಉದ್ದ ತಲೆ ಕೂದಲಿಗೆ ಎಣ್ಣೆ ಹಚ್ಚಿಕೊಂಡು ಬಿಸಿ ನೀರಿನಿಂದ ತೊಳೆದುಕೊಂಡು ಬಿಸಿಲಿನಲ್ಲಿ ತಾನು ಮತ್ತು ತನ್ನ ಹೆಂಡತಿ ವರಾಂಡಾದಲ್ಲಿ ಬಿಸಿಲಿನಲ್ಲಿ ಕೂಡುತ್ತಿದ್ದರು. ಆಗ ನನಗೆ ಗೊತ್ತಾಯ್ತು ಏನಂದ್ರ ಅವನು ಸಂಡೆ ಕೊ ಸಂಡೆ ಮಾತ್ರ ಸ್ನಾನ ಮಾಡತಾನ ಅಂತ. ನಾನೂ ಹಾಗೇ ಮಾಡಲು ಸುರು ಮಾಡಿದೆ. ನಾನು ಹತ್ತು ನಿಮಿಷಗಳಲ್ಲಿ ಸ್ನಾನ ಮಾಡಿ ಬರುವ ನಟನೆ ಒಂದು ದಿನ ನನ್ನ ಹೆಂಡತಿಗೆ ಗೊತ್ತಾಯಿತು. ಆಗ ಅವಳು ನನ್ನ ಬಾತ್‌ರೂಮಿಗೆ ಎಳೆದುಕೊಂಡು ಹೋದಳು. ಆಗಿನ ನನ್ನ ಭಾವನೆಯ ಬಳ್ಳಿ ಕವನ ರೂಪದಲ್ಲಿ ಹೀಗಿದೆ.

ಸ್ನಾನ ಧರ್ಮ

ಗಂಡ : ಬಿಡು ಬಿಡು ನನ್ನ ಕೈ ಬಿಡು
ಎಳೆಯ ಬೇಡ ಪ್ರಿಯೆ ಎಳೆಯ ಬೇಡ
ಸಾಕು ಸ್ನಾನ ಧರ್ಮದ ಈ ರೂಪ
ತಡೆಯಲಾರೆ ಚಳಿಯ ಪ್ರಕೋಪ

ಸ್ನಾನ ಮಾಡಿ ಸ್ನಾನ ಮಾಡಿ
ದಿನಾಲು ಇದೇ ರಮರಾಡಿ
ಹೇಳು ಏನಿದೆ ಈ ಕರ್ಮದಲಿ
ವ್ಯರ್ಥ ಹಾಳು ಸಮಯದಲಿ

ನಾನೇನಂಥ ಪಾಪ ಮಾಡಿರುವೆ
ನನ್ನನ್ನೀ ಕಷ್ಟಕ್ಕೆ ಗುರಿ ಮಾಡುವೆ
ಮತ್ತೆ ಈ ರಾಶನ್ನಿನ ಯುಗದಲಿ
ಏಕೆ ನೀರು ವ್ಯರ್ಥ ಹರಿಸಲಿ.

ಏನಂದಿ? ಆತ್ಮ ಶುದ್ಧಿಗೇನಾ?
ಏ ಹುಚ್ಚಿ, ನಾನು ಸ್ವಯಂ ಶುದ್ಧ
ಬಿಡು ಬಿಡು ಎಳೆಯಬೇಡ
ನನ್ನ ಮಾತನಲ್ಲಗಳಿಯಬೇಡ

ಹೆಂಡತಿ : ಕೈ ಬಿಡುವೆ ಮೊದಲು ಹೇಳಿರಿ
ಯಾಕೆ ಮನುಷ್ಯ ಜನ್ಮ ತಾಳಿದಿರಿ ?
ಕತ್ತೆ, ನಾಯಿ, ಕೋಣದ ಮಾದರಿ
ಸ್ನಾನಕ್ಕೆ ಶರಣು ಹಾಕಿದಿರಿ ?

ಗಂಡ : ಅಜ್ಞಾನಿ, ಗಂಡಸಂತೂ ಉರಿಯುವ ಕೆಂಡ
ತಪ ತೇಜಸ್ಸಿನ ಅಗ್ನಿಕುಂಡ
ಏನು ನಳದ ಥಣ್ಣನ ನೀರಿನಿಂದ
ಆರಿಸುವೆಯಾ ಅಗ್ನಿಶಾಮಕ ಯಂತ್ರದಿಂದ?

ಈ ಶರೀರ ಜ್ವಾಲೆ ನೈವೇದ್ಯ ಬೇಡುತಿದೆ
ತುಪ್ಪ ಸಕ್ಕರೆ ಬದಾಮ, ಸಜ್ಜಿಗೆ
ಹೇಳು ಏನು ಕೊಡುವೆ ಇಂದಿನ ತಿಂಡಿ
ಖೀರು, ಶೀರಾ, ಪೂರಿ ಎಲ್ಲಿದೆ ಈ ತಿಂಡಿ?

ಹೆಂಡತಿ : ಆಯಿತು, ಶೀರಾ, ಪೂರಿ, ಖೀರೆಲಲಾ
ಇರುವವು ಸದಾ ನಿಮ್ಮ ಬಾಯಲ್ಲಿ
ಸ್ನಾನ, ಪೂಜೆ, ಭಜನೆ ದೇವರೆಲ್ಲಾ
ಸೇರುವವು ಮನೆಯ ಒಲೆಯಲ್ಲಿ.

ಗಂಡ : ಇದೇನು ಹೀಗೆ ಹೇಳುವೆ ಪ್ರಿಯೆ
ನಾನು ಸ್ನಾನ ಪೂಜೆ ಭಜನೆ ಮಾಡಲಾ
ಉಳಿದವರಿಗೆ ಕೊಟ್ಟ ಉಪದೇಶವನು
ಸ್ವಯಂ ನಾನೂ ಪಾಲಿಸಲಾ ?

ಪ್ರಿಯತಮೆ ನಿನ್ನದು ತಪ್ಪು ಸಿದ್ಧಾಂತ
ಒಬ್ಬರು ಹೇಳುವರು ಉಳಿದವರು ಪಾಲಿಸುವರು
ಹೇಳು ಯುದ್ಧ ಭೂಮಿಯ ಚರಿತ್ರದಾದ್ಯಂತ
ಯಾವ ಸೇನಾಪತಿ ಸತ್ತಿರುವರು?

ಧರ್ಮ, ಕರ್ಮ, ಸ್ನಾನ ಸಂಧ್ಯಾ
ಮನೆಯಲಿ ಎಂದಾದರೂ-ತಂದದ್ದು ಕಂಡ್ಯಾ?
ತಿಳಿದವಳು ನೀನು, ಹೇಳಿಲ್ಲವೆ ನಿನಗೆ
ಕಾರ್ತಿಕದಿಂದ ಚೈತ್ರದವರೆಗೆ ಸ್ನಾನ ವರ್ಜಿತ
ನನಗೆ ಅ

**ಎಚ್.ಎಸ್. ಕುಲಕರ್ಣಿ**

## ಅನುಭವದೊಡನೆ... ನೆನಪಿನ ಸುಳಿ

ಹಳ್ಳಿಯ ಬದುಕು
ದಿನದ ನಸುಕು
ಹುಣ್ಣಿಮೆಯ ಬೆಳದಿಂಗಳು
ಅಮಾವಾಸ್ಯೆಯ ಕಾರ್ಗತ್ತಲು

ಹರಿವ ನದಿಯ ಸುಳೀ
ತಪ್ಪಲ ಝರಿಯ ಝುಳು ಝುಳು ನಾದ
ಆಕಳ ಕರುವಿನ ಕರೆ
ಶಿಶುವಿನ ಕಿಲಕಿಲ ನಗೆ
ನಿಷ್ಕಲ್ಮಷ ನಸುನಗೆ
ಕಿಶೋರನ ಹಸಿವಿನ ಅಳು
ನಿದ್ದೆಯ ಸಿಹಿ ಕಹಿ ಕನಸಿನ ಮುಗುಳ್ನಗೆ; ಭಯ
ಯುವಕನ ಅಟ್ಟಹಾಸ
ಯುವತಿಯ ಕಾಡಿಗೆ ಕಣ್ಣಿನ ನೋಟ
ಸಮುದ್ರದ ಅಪ್ಪಳಿಸುವ ಅಲೆ
ಉತ್ತುಂಗ ಪರ್ವತದ ಹಿಮಶಿಖರ
ಉದುರಿದ ಎಲೆಗಳಿಂದ ಬೋಳಾದ ಮರದ ನಿಲವು
ವಸಂತದ ಕೆಂಪು ಹಸಿರು ಚಿಗುರು
ಮಾಘಿಯ ಬಿಸಿಲು ಆಲಿಕಲ್ಲು ಮಳೆ
ಜೇಷ್ಠಾಶಾಡದ ಪ್ರಖರ ಪ್ರಕಾಶ
ಮಳೆಯ ಹನಿಯಲ್ಲಿ ಕಂಡ ಕಾಮನ ಬಿಲ್ಲು
ಕೊರೆವ ಛಳಿಯಲ್ಲಿ ಬಿಸಿ ಬಿಸಿ ಊಟ
ಕಂಬಳಿ ಹೊದ್ದು ಮಲಗಿದ್ದಾಗ ಏಳಲಿಷ್ಟವಿಲ್ಲದ ಕಷ್ಟ
ಸ್ನೇಹದ ಒಡನಾಟ, ಆಸೆ ಆಕಾಂಕ್ಷೆಗಳ ಮಾಟ
ಪಂಜರದ ಗಿಳಿ ಪಂಜರದಲ್ಲಿ ತನ್ನ ತಲೆ ತಗಲುತ್ತಿದ್ದರೂ
ಬಿಡದೆ ಹಾರುವ ನೋಟ
ಎಲ್ಲೋ ಜತನವಾಗಿ ಮುಚ್ಚಿಟ್ಟ ಗಂಟನ್ನು
ಹುಡುಕಿ ಹುಡುಕಿ ಸುಸ್ತಾದ ವೃದ್ಧಳ ತಿಣುಕಾಟ
ಆಗಾಗ್ಗೆ ಊಹಾಪೋಹದ "ಕಾಟ"ಗಳ ಕೆಣಕಾಟ
ಮನಸಿನ ತೊಳಲಾಟ; ಚಿಂತನೆಯ ನಾಗಾಲೋಟ
ಏನೆಲ್ಲ ಭ್ರಮೆಯ ಆಟ, ನಾ ಕಲಿತ ಪಾಠ
ಆಹಾ, ಏನೆಲ್ಲಾ ಚೆನ್ನ; ನನ್ನ ಈ ಬಾಳೆ ಚೆನ್ನ !

***ಡಾ. ಅಹಲ್ಯಾ ಚಿಂತಾಮಣಿ***

## 'ನಿಮ್ಮನೆಗೆ ಬಂದಾಗ'

ನಿನ್ನನ್ನು ನೋಡಲಿಕೆ ನಿಮ್ಮನೆಗೆ ಬಂದಾಗ
ಬಾಗಿಲಲಿ ನಿಂತದ್ದು ನಿಮ್ಮಪ್ಪ ತಾನೇ?
ನಾ ಕಾರಿನಿಂದಿಳಿದು ಬಾಗಿಲಿಗೆ ಬರುವಾಗ
ಕಿಟಕಿಯಲಿ ಇಣುಕಿದ್ದು ನಿಮ್ಮಮ್ಮ ತಾನೇ? ॥1॥

ಜರಿಯ ಸೀರೆಯನುಡಿಸಿ ಮಲ್ಲಿಗೆಯ
ಮಾಲೆಯನು
ಮುಡಿಸಿ ಸಿಂಗರಿಸಿದ್ದು ನಿಮ್ಮಕ್ಕ ತಾನೇ ?
ಸಿಹಿಖಾತು ಉಪ್ಪಿಟ್ಟು ರುಚಿಯಾದ ತಿಂಡಿಯನು
ಮಾಡಿದ್ದು–ಕಳಿಸಿದ್ದು ನಿಮ್ಮಜ್ಜಿ ತಾನೇ? ॥2॥

ನನ್ನ ಪ್ರಶ್ನೆಗೆ ನೀನು ಕೊಟ್ಟಂತ ಉತ್ತರ
ಬಲುಚೂಟಿ ನಿನತಂಗಿ ಕಲಿಸಿದ್ದು ತಾನೇ?
ನಮ್ಮಮ್ಮ ಕೇಳಿದೊಡೆ ನೀನು ಹಾಡಿದ ಸ್ವರ
ನಿಮ್ಮಮ್ಮ ಮುದ್ದಿನಲಿ ನುಲಿಸಿದ್ದು ತಾನೇ? ॥3॥

ಶಾಸ್ತ್ರಿಗಳು ನಮ್ಮನೆಗೆ ಬಂದು ನನ್ಕೇಳಿದರು
"ಏನಪ್ಪಾ ಹುಡುಗಾ ಒಪ್ಪಿದೆಯೇ ಹುಡುಗಿ"?
"ನೀ ಹೂಂ ಅಂದರೆ ಮದುವೆ"–ಎಂದ್ಹೇಳಿದರು.
ಝುಮ್ಮೆಂದು ನಲುಗೀತು ಮೈಮನಸು ನಡುಗಿ. ॥4॥

ನಾನವರಿಗ್ಹೇಳಿದೆ–"ಹೋಗಿ ಹುಡುಗಿಯ ಕೇಳಿ–
ಈ ಪ್ರಶ್ನೆಯನ್ನು ಈಗಿಲಿಂದೀಗ–
ಅವಳಿಡುವ ಉತ್ತರವೇ ನನ್ನುತ್ತರವು ಏಳಿ
ಈಗಲೇ ಹೊರಡಿ ಸಾರ್–ಬೇಗ ಬೇಗ" ॥5॥

***ಸುಧಾಕರ ಕುರಂದವಾಡ, ಜನಕಪುರಿ***

## ಓ ಓದುಗ

ಇನಿತು ದಿನ ನಾನಿರಲಿಲ್ಲ ನೀನಿದ್ದೆ
ಇದೀಗ ನನ್ನ ಜೊತೆಗೆ ನೀನಿರುವೆ.
ನಿನ್ನ ಕುಡಿನೋಟ ಪಸರಿಸಿತು ನವಚೇತನ
ನಿನ್ನ ಒಡನಾಟ ತಂದಿಹುದು ನವ ಜೀವನ
ನಿನ್ನ ಸವಿಮಾತೇ ನಮ್ಮಿಬ್ಬರ ಸಮ್ಮಿಳನ
ಅದರಿಂದಲೇ ಚಿನುಗಿಹುದು ಈ ಕವನ

ನಾ ಆಶಿಸುವೆ ನಿನಗಾಗಿ
ತಾವರೆಯ ಕೆಂಪಿರಲಿ ಮೊಗನಲಿ
ಬಾನರವಿಯ ಬಿಸಿಯಪ್ಪುಗೆಯಿರಲಿ ಮನದಲಿ
ಚೆಂದಿರನ ತಂಪಿರಲಿ ತನುವಿರಲಿ
ತಾರೆಗಳ ಮಿನುಗಿರಲಿ ನಗುವಿನಲಿ
ಪಾದರಸದ ಚುರುಕಿರಲಿ ಕರಗಳಲಿ
ಹಂಸಗಳ ಚೆಲುವಿರಲಿ ನಡುಗೆಯಲಿ
ಬಾಳನೆದುರಿಸುವ ಕೆಚ್ಚಿರಲಿ ಹೃದಯದಲಿ
ಚಂದನದ ಕಂಪಿರಲಿ ಬಾಳಿನಲಿ
ಸಹಸ್ರಚಂದ್ರ ದರುಶನದ ಭಾಗ್ಯವಿರಲಿ

ಇದೆಲ್ಲ ಇರುವ ನಿನ್ನ ಸ್ನೇಹ ನಮಗಿರಲಿ
ನಾನಿನ್ನು ಬರಲೆ ಓ ನನ್ನ ತಂಪೆಲರೇ.

***ನರೇಂದ್ರ ಎ.***



# ದೆಹಲಿ ಸರಕಾರದ ಆರೋಗ್ಯ ಸೇವೆಗಳ ನಿರ್ದೇಶಕ

## –ಡಾ. ಎನ್.ವಿ. ಕಾಮತ್



ದೆಹಲಿ ಸರಕಾರದ ಆರೋಗ್ಯ ಸೇವೆಗಳ ನಿರ್ದೇಶಕರಾಗಿ 2011 ರಿಂದ ಕೆಲಸ ನಿರ್ವಹಿಸುತ್ತಿರುವ ಡಾ. ಎನ್.ವಿ. ಕಾಮತ್ ಅವರು ಆರೋಗ್ಯ ಸೇವೆಗಳಲ್ಲಿನ ವಿಶೇಷ ಸುಧಾರಣೆ, ಹಳ್ಳಿಗಳಲ್ಲಿರುವ ಪ್ರಾಥಮಿಕ ಆರೋಗ್ಯ ಚಿಕಿತ್ಸಾ ಕೇಂದ್ರಗಳಲ್ಲಿ ವಿಶೇಷ ಕಟ್ಟಡಗಳ ನಿರ್ಮಾಣ, ಅತ್ಯುತ್ತಮ ವೈದ್ಯಕೀಯ ಪರಿಕರಗಳ ವಿತರಣೆ, ಉಚಿತ ವೈದ್ಯಕೀಯ ಸೇವೆ ನೀಡುವುದರ ಜೊತೆಗೆ ಖಾಸಗಿ ಆಸ್ಪತ್ರೆಗಳಲ್ಲಿ ಸಹ ಬಡವರಿಗೆ ಉಚಿತ ವೈದ್ಯಕೀಯ ಸೇವೆ ಕೊಡಿಸುವ ಮಹತ್ತರ ಜವಾಬ್ದಾರಿಯನ್ನು ವಹಿಸಿದ್ದಾರೆ.

ಮನುಷ್ಯರ ಸರಾಸರಿ ಆಯುಸ್ಸು ಹೆಚ್ಚಿರುವುದರೊಂದಿಗೆ ಹರಡಲು ಆಗದ ರೋಗಗಳಾದಂತಹ ಹೈಪರ್ ಟೆನ್ಷನ್, ರಕ್ತದೊತ್ತಡ, ಕ್ಯಾನ್ಸರ್, ಸಕ್ಕರೆ ಕಾಯಿಲೆಯಂತಹ ರೋಗಗಳು ಹೆಚ್ಚುತ್ತಿದ್ದು ಇವು ಸಾಮಾನ್ಯವಾಗಿ ಹಿರಿಯ ನಾಗರಿಕರನ್ನು ಅನೇಕ ರೀತಿಯಲ್ಲಿ ತೊಂದರೆ ನೀಡುತ್ತಿವೆ. ಈ ರೋಗಗಳ ನಿವಾರಣೆ ಹಾಗೂ ತಡೆಗಟ್ಟುವಿಕೆಗಾಗಿ ರೋಗಗಳ ಮಾಹಿತಿ, ತಿಳುವಳಿಕೆಗಾಗಿ ಇನ್ನೂ ಹೆಚ್ಚಿನ ಪ್ರಚಾರ ಅಗತ್ಯವಿದೆ. ಆ ಕೆಲಸ ಮಾಡಲು ತಾವು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದಾಗಿ ಡಾ. ಕಾಮತ್ ಅವರು ತಿಳಿಸಿದರು.

ಹಿರಿಯ ನಾಗರಿಕರಿಗಾಗಿ ವಿಶೇಷ ಚಿಕಿತ್ಸಾ ಕೇಂದ್ರಗಳನ್ನು ತೆರೆದು ಅಲ್ಲಿ ಅವರಿಗೆ ಕಡಿಮೆ ಹಾಗೂ ಅಗತ್ಯವಿರುವ ರೀತಿಯಲ್ಲಿ ವೈದ್ಯಕೀಯ ಸೇವೆ ದೊರಕಿಸಿ ಕೊಡುವ ಎಲ್ಲ ಪ್ರಯತ್ನಗಳನ್ನು ಅವರು ಮಾಡುತ್ತಾರೆ ಎಂದಿದ್ದಾರೆ. ಹಾಗೆಯೇ ಬಡವರು, ಆರ್ಥಿಕವಾಗಿ ಹಿಂದುಳಿದವರು ಸಹ ಖಾಸಗಿ ಆಸ್ಪತ್ರೆಗಳಲ್ಲಿ ಕಡಿಮೆ ದರದಲ್ಲಿ ಅಥವಾ ಉಚಿತ ವೈದ್ಯಕೀಯ ಸೇವೆ ಪಡೆಯುವಲ್ಲಿ ತಮ್ಮಿಂದ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡುತ್ತೇನೆಂದು ಹೇಳಿದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ದಾಸನಕೊಪ್ಪ ಎಂಬ ಹಳ್ಳಿಯಲ್ಲಿ ವಿ.ಜಿ. ಕಾಮತ್ ಹಾಗೂ ರಾಧಾಬಾಯಿ ಕಾಮತ್ ಅವರ ಹೆಮ್ಮೆಯ ಪುತ್ರ ಡಾ. ಎನ್.ವಿ. ಕಾಮತ್ ಅವರು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ದಾಸನಕೊಪ್ಪದಲ್ಲಿ ಮುಗಿಸಿ ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಶಿರಸಿ ಹಾಗೂ ಕಾರವಾರದಲ್ಲಿ ನಡೆಸಿ ಬೆಳಗಾವಿಯ ಪ್ರತಿಷ್ಠಿತ ಜವಾಹರಲಾಲ್ ನೆಹರು ವೈದ್ಯಕೀಯ ಕಾಲೇಜ್(ಜೆ.ಎನ್.ಎಂ.ಸಿ.)ನಿಂದ ಎಂ.ಬಿ.ಬಿ.ಎಸ್. ಪದವಿಯನ್ನು 1975ರಲ್ಲಿ ಚಿನ್ನದ ಪದಕದೊಂದಿಗೆ ಪಡೆದುಕೊಂಡರು. ಜೆ.ಎನ್.ಎಂ.ಸಿ. ಬೆಳಗಾವಿಯ ವೈದ್ಯಕೀಯ ಕಾಲೇಜಿನ ಅತ್ಯುತ್ತಮ ವಿದ್ಯಾರ್ಥಿ ಎಂಬ ಕೀರ್ತಿಗೆ ಪಾತ್ರರಾಗಿದ್ದರು.

ಕೇಂದ್ರಿಯ ಆರೋಗ್ಯ ಸೇವೆಗೆ 1977ರಲ್ಲಿ ವೈದ್ಯರಾಗಿ ಜಾರ್‌ಖಂಡ್‌ನ ಧನಬಾದ್‌ನಲ್ಲಿ ಸೇವಾವೃತ್ತಿ ಆರಂಭಿಸಿದರು. ನಂತರ 1983 ರಿಂದ 1986ರವರೆಗೆ ಪಟ್ನಾ ಮೆಡಿಕಲ್ ಕಾಲೇಜಿನಿಂದ ಎಂ.ಎಸ್. (ಆರ್ಥೋಪೆಡಿಕ್) ಸ್ನಾತಕೋತ್ತರ ಪದವಿ ಪಡೆದು 1986ಕ್ಕೆ ದೆಹಲಿಯ ಆರೋಗ್ಯ ಸೇವೆಗಳಿಗೆ ವರ್ಗಾವಣೆಯಾಗಿ ಬಂದರು. ಸಂಜಯ್ ಗಾಂಧಿ ಮೆಮೋರಿಯಲ್ ಆಸ್ಪತ್ರೆಯಲ್ಲಿ ಆರ್ಥೋಪೆಡಿಕ್ ಸರ್ಜನ್ ಆಗಿ 1998ರವರೆಗೆ ಕಾರ್ಯ ನಿರ್ವಹಿಸಿ, 1999 ರಿಂದ 2003ರವರೆಗೆ ದೆಹಲಿಯ ಡಾ. ಬಾಬಾಸಾಹೇಬ ಅಂಬೇಡ್ಕರ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ (ಮೆಡಿಕಲ್ ಸುಪರಿನ್‌ಟೆಂಡೆಂಟ್ ಆಗಿ) ಕಾರ್ಯ ನಿರ್ವಹಿಸುವುದರು. ಜೊತೆಗೆ 500 ಹಾಸಿಗೆಯ ಈ ಆಸ್ಪತ್ರೆಯ ಹೊಸ ಕಟ್ಟಡ ಹಾಗೂ ವೈದ್ಯಕೀಯ ಸೇವೆಗಳ ಉಪಕರಣಗಳೊಂದಿಗೆ ಅದನ್ನು ಸುಸಜ್ಜಿತಗೊಳಿಸಿದ ಶ್ರೇಯವು ಇವರಿಗೆ ಸಲ್ಲುತ್ತದೆ.

ನಂತರ 150 ಹಾಸಿಗೆಯ ಸುಸಜ್ಜಿತವಾದ ಮಹರ್ಷಿ ವಾಲ್ಮೀಕಿ ಆಸ್ಪತ್ರೆಯನ್ನು ಕಟ್ಟಿ ಅಲ್ಲಿ 2003 ರಿಂದ 2009ರವರೆಗೆ ವೈದ್ಯಕೀಯ ಸೇವೆಯನ್ನು ಮಾಡಿದರು. ವೈದ್ಯಕೀಯ ಅಧೀಕ್ಷಕರಾಗಿ, ತದನಂತರ 2009 ರಿಂದ 2011ರವರೆಗೆ ಸಂಜಯ್ ಗಾಂಧಿ ಸ್ಮಾರಕ ಆಸ್ಪತ್ರೆಯ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸಿದರು. ಇವರು ಮಾಡಿದ ಅನೇಕ ಉನ್ನತ ಕಾರ್ಯಗಳನ್ನು ಸ್ಮರಿಸಿ ದೆಹಲಿ ಸರಕಾರ 2011 ರಿಂದ ಡಾ. ಎಸ್.ವಿ. ಕಾಮತ್ ಅವರನ್ನು ದೆಹಲಿ ಆರೋಗ್ಯ ಸೇವೆಗಳ ಉನ್ನತ ಹುದ್ದೆಯಾದ ನಿರ್ದೇಶಕರನ್ನಾಗಿ ಭಡ್ತಿ ನೀಡಿತು.

ಇವರು ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಅತ್ಯುತ್ತಮ ಸೇವೆಯನ್ನು ಸ್ಮರಿಸಿ ದೆಹಲಿ ಸರಕಾರದ ಮುಖ್ಯಮಂತ್ರಿಗಳು 2001ರಲ್ಲಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದರು. ಡಾ. ಕಾಮತ್ ಅವರು ದೆಹಲಿ ಕರ್ನಾಟಕ ಸಂಘದ 1988–89ರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಹೊರನಾಡಿನಲ್ಲಿ ಕನ್ನಡ ನಾಡುನುಡಿಯ ಸೇವೆಯನ್ನು ಸಲ್ಲಿಸಿದ್ದಾರೆ.

***ಎಸ್.ಎಲ್. ಭಂಡಾರಕರ್***

## ಕೃಷಿಕ್ ಸರ್ವೋದಯ ಫೌಂಡೇಶನ್‌ನಿಂದ

# ಸಿವಿಲ್ ಸರ್ವಿಸ್ ಪರೀಕ್ಷಾ ಮಾರ್ಗದರ್ಶನ

ಇದೇ 2014ರಲ್ಲಿ ನಡೆಯಲಿರುವ ಸಿವಿಲ್ ಸರ್ವಿಸ್ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳಲು ಕರ್ನಾಟಕದಿಂದ ದೆಹಲಿಗೆ ಬಂದಿರುವ ಸುಮಾರು 350 ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡಲು ದೆಹಲಿಯ ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಹಿರಿಯ ಐ.ಎ.ಎಸ್. ಅಧಿಕಾರಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ನವಂಬರ್ 8ರಂದು ಏರ್ಪಡಿಸಲಾಯಿತು.

ಹಿರಿಯ ನಿವೃತ್ತ ಸಿವಿಲ್ ಸರ್ವಿಸ್ ಅಧಿಕಾರಿ ಶ್ರೀ ಎನ್.ಜೆ. ಕಾಮತ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಕರ್ನಾಟಕ ಕೇಡರ್‌ನ ಐ.ಎ.ಎಸ್. ಅಧಿಕಾರಿಗಳಾದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದಲ್ಲಿ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಆರ್ಥಿಕ ಸಲಹಕಾರರಾಗಿರುವ ಡಾ. ಸುಭಾಸ್‌ಚಂದ್ರ ಖುಂಟ್ಯಾ, ಹುಡ್ಕೋದ ಅಧ್ಯಕ್ಷರಾದ ಶ್ರೀ ವಿ.ಪಿ. ಬಳಿಗಾರ್, ಲಘು ಉದ್ಯೋಗ್ ಸಚಿವಾಲಯದಲ್ಲಿರುವ ಶ್ರೀ ಬಿ.ಎಚ್. ಅನಿಲ್ ಕುಮಾರ್, ವಿದೇಶ ವ್ಯವಹಾರಗಳ ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿಯಾಗಿರುವ ಶ್ರೀ ಎ.ಆರ್. ಘನಶ್ಯಾಮ್, ಐ.ಎಫ್.ಎಸ್., ರಾಜ್ಯಸಭೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿರುವ ಶ್ರೀಮತಿ ಶಾರದಾ ಸುಬ್ರಹ್ಮಣ್ಯಂ, ಐ.ಎ. ಅಂಡ್ ಎ.ಎಸ್., ಮತ್ತು ಕೃಷಿ ಸಚಿವಾಲಯದಲ್ಲಿ ಕೃಷಿ ಬೆಲೆ ಆಯೋಗದ ಸದಸ್ಯರಾಗಿರುವ ಶ್ರೀ ಡಿ.ಎಸ್. ರಘು ಅವರು ಭಾಗವಹಿಸಿದ್ದರು.

ಅಲ್ಲದೇ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಮತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರೂ ಪ್ರೋತ್ಸಾಹದ ನುಡಿಗಳನ್ನು ನುಡಿದರು.

ಸುಭಾಸ್‌ಚಂದ್ರ ಖುಂಟ್ಯಾ ಅವರು ಮಾತಾಡುತ್ತಾ ಪರೀಕ್ಷೆಗಳಲ್ಲಿ ಹೆಚ್ಚು ಬರೆಯುವುದನ್ನು ಅಭ್ಯಾಸ ಮಾಡಿ, ಬರೆಯುವಾಗ ನಾವು ಯಾವುದೇ ಒಂದು ವಿಷಯವನ್ನು ತರ್ಕಬದ್ಧವಾಗಿ ಮಂಡಿಸುತ್ತಾ, ಆಕರ್ಷಕ ಆರಂಭ ಹಾಗೂ ತರ್ಕಬದ್ಧವಾದ ಮುಕ್ತಾಯವಿದ್ದಾಗ ಪರೀಕ್ಷಕರ ಗಮನ ಸೆಳೆದು ಹೆಚ್ಚು ಅಂಕ ಗಳಿಸಬಹುದು ಎಂದರು. ಕಠಿಣ ಶ್ರಮ ಹಾಗೂ ದೃಢ ವಿಶ್ವಾಸದಿಂದ ಸಾಮಾನ್ಯ ಜ್ಞಾನಗಳಿಗೆ ಅರ್ಥ ತುಂಬಿ ಐ.ಎ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಬಹುದು ಎಂದು ವಿ.ಪಿ. ಬಳಿಗಾರ್ ಅವರು ಹೇಳಿದರು.

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಕರ್ನಾಟಕದ ಅಭ್ಯರ್ಥಿಗಳು ಸಂಘದ ಗ್ರಂಥಾಲಯ ಮತ್ತು






ವಾಚನಾಲಯದ ಸದುಪಯೋಗವನ್ನು ಪಡೆಯಬಹುದೆಂದರು. ಕೃಷಿಕ್ ಸರ್ವೋದಯ ಫೌಂಡೇಶನ್ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರು ಹಿರಿಯ ಐ.ಎ.ಎಸ್. ಅಧಿಕಾರಿಗಳು ಮತ್ತು ಹೊಸದಾಗಿ ಪರೀಕ್ಷೆ ಪಾಸು ಮಾಡಿ ಸೇವೆಯಲ್ಲಿರುವ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದು ಅಭ್ಯರ್ಥಿಗಳಿಗೆ ಯಾವುದೇ ಸಮಯದಲ್ಲಿ ಮಾರ್ಗದರ್ಶನದ ಅವಶ್ಯಕತೆ ಕಂಡುಬಂದಲ್ಲಿ ಸಹಾಯ ಮಾಡಲು ಸಿದ್ಧ ಎಂದರು.


ಆರಂಭದಲ್ಲಿ ಪ್ರಾಸ್ತಾವಿಕ ಭಾಷಣ ಮಾಡುತ್ತ ಫೌಂಡೇಶನ್‌ನ ಕಾರ್ಯದರ್ಶಿ ಶ್ರೀ ವಿ.ಆರ್. ಗುಡ್ಡೇಗೌಡ ಅವರು ಕಳೆದ ಆರು ವರ್ಷಗಳ ಹಿಂದೆ ದೆಹಲಿಯಲ್ಲಿ ತನ್ನ ಶಾಖೆಯನ್ನು ತೆರೆದ ಫೌಂಡೇಶನ್ ಕರ್ನಾಟಕದ ಅಭ್ಯರ್ಥಿಗಳಿಗೆ ಸಂವಾದ ಜೊತೆಗೆ ಮಾರ್ಗದರ್ಶನ ಅಣಕು ಸಂದರ್ಶನಗಳನ್ನು ಕರ್ನಾಟಕದ ಹಿರಿಯ ಐ.ಎ.ಎಸ್. ಅಧಿಕಾರಿಗಳ ಸಹಯೋಗದೊಂದಿಗೆ ನಡೆಸಿ ಸುಮಾರು 130 ಅಧಿಕಾರಿಗಳು ಐ.ಎ.ಎಸ್. ಪಾಸಾಗಿ ಭಾರತದ ವಿವಿಧ ರಾಜ್ಯಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಹಾಜರಿದ್ದ ಕೃಷಿಕ್ ಸರ್ವೋದಯ ಫೌಂಡೇಶನ್ ನವದೆಹಲಿ ಶಾಖೆಯ ನಿಕಟಪೂರ್ವ ಅಧ್ಯಕ್ಷರುಗಳಾದ ಡಾ. ಎಂ.ಜೆ. ಚಂದ್ರೇಗೌಡ ಮತ್ತು ಬಿ.ಆರ್. ನಟೇಶ್ ಅವರಿಗೆ ಹೂಗುಚ್ಛ ನೀಡಿ ಗೌರವಿಸಲಾಯಿತು.

ಈ ಕಾರ್ಯಕ್ರಮನ್ನು ಕೃಷಿಕ್ ಸರ್ವೋದಯ ಫೌಂಡೇಶನ್‌ನ ಜಂಟಿ ಕಾರ್ಯದರ್ಶಿಗಳಾದ ಶ್ರೀ ಪಿ.ಸಿ. ಶ್ರೀನಿವಾಸ ಅವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಅಭ್ಯರ್ಥಿಗಳು ಸುಮಾರು ಪ್ರಶ್ನೆಗಳನ್ನು ನೆರೆದಿದ್ದ ಹಿರಿಯ ಐ.ಎ.ಎಸ್. ಅಧಿಕಾರಿಗಳಿಗೆ ಕೇಳಿ ಉತ್ತರ ಪಡೆದುಕೊಂಡರು. ಕಾರ್ಯಕ್ರಮದ ಮೊದಲಿಗೆ ಕುವೆಂಪು ರಚಿತ ನಾಡಗೀತೆಯನ್ನು ನುಡಿಸಲಾಯಿತು. ಅ

***ವಿ. ಆರ್. ಗುಡ್ಡೇ ಗೌಡ***

## ಮೊದಲ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಮಲಯಾಳೀ ಲೇಖಕ ಕೆ. ಸಚ್ಚಿದಾನಂದನ್‌ಗೆ



ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನವು ಈ ವರ್ಷದಿಂದ ನೀಡಲು ಉದ್ದೇಶಿಸಿರುವ 'ಕುವೆಂಪು ರಾಷ್ಟ್ರೀಯ ಪುರಸ್ಕಾರ'ಕ್ಕೆ ಮಲೆಯಾಳಂನ ಹಿರಿಯ ಲೇಖಕ, ಚಿಂತಕ ಪ್ರೊ. ಕೆ. ಸಚ್ಚಿದಾನಂದನ್ ಅವರನ್ನು ಆಯ್ಕೆ ಮಾಡಲಾಗಿದೆ.


ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವಾದ ಡಿಸೆಂಬರ್ 29ರಂದು ಅವರ ಹುಟ್ಟೂರಾದ ಕುಪ್ಪಳಿಯಲ್ಲಿ ಐದು ಲಕ್ಷ ರೂಪಾಯಿಗಳ ಈ ಪ್ರಶಸ್ತಿಯನ್ನು ನೀಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಹಂಪ ನಾಗರಾಜಯ್ಯ ಅವರು ತಿಳಿಸಿದ್ದಾರೆ. ಡಾ. ಚಂದ್ರಶೇಖರ ಕಂಬಾರ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಆಯ್ಕೆ ಸಮಿತಿಯಲ್ಲಿ ವಿದ್ವಾಂಸರಾದ ಪ್ರೊ. ಬಿ.ಎ. ವಿವೇಕ ರೈ ಮತ್ತು ಡಾ. ಪುರುಷೋತ್ತಮ ಬಿಳಿಮಲೆ ಅವರು ಸದಸ್ಯರಾಗಿದ್ದರು.

ಪ್ರೊ. ಕೆ. ಸಚ್ಚಿದಾನಂದನ್ ಅವರು ಆಂಗ್ಲ ಪ್ರಾಧ್ಯಾಪಕರಾಗಿದ್ದು, ಸಾಹಿತ್ಯ ಅಕಾಡೆಮಿ ಪತ್ರಿಕೆಯಾದ ಇಂಡಿಯನ್ ಲಿಟರೇಚರ್‌ನ ಸಂಪಾದಕಾಗಿದ್ದರು. ಒಂದು ದಶಕದವರೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. 23 ಕವನ ಸಂಕಲನ, 16 ಅನುವಾದ ಕವಿತಾ ಸಂಕಲನ, 21 ಪ್ರಂಬಧಗಳು, 17 ವಿವಿಧ ಅನ್ಯಭಾಷೆಯ 25 ಸಂಕಲನಗಳು ಪ್ರಕಟವಾಗಿವೆ.



## ದೂರದರ್ಶನದ ಮಹೇಶ್ ಜೋಷಿ ದೆಹಲಿಗೆ

ದೂರದರ್ಶನದ ಹೆಚ್ಚುವರಿ ಮಹಾ ನಿರ್ದೇಶಕರಾದ ನಾಡೋಜ ಮಹೇಶ್ ಜೋಷಿ ಅವರು ಬೆಂಗಳೂರಿನಿಂದ ದೆಹಲಿಯ ದೂರದರ್ಶನದ ಮಹಾ ನಿರ್ದೇಶನಾಲಯಕ್ಕೆ ವರ್ಗಾವಣೆಯಾಗಿ ಬಂದಿದ್ದಾರೆ.




## ಪುರುಷೋತ್ತಮ ಬಿಳಿಮಲೆಯವರ ಬಹುರೂಪ ಬಿಡುಗಡೆ

ಹಿರಿಯ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದ ಅಂಕಣಗಳ ಸಂಕಲನ ಪುಸ್ತಕ 'ಬಹುರೂಪ'ವು ಡಿಸೆಂಬರ್ 15ರಂದು ಪೂರ್ವಾಹ್ನ 10.30 ಕ್ಕೆ ಬೆಂಗಳೂರಿನ ಬಸನಗುಡಿಯಲ್ಲಿರುವ ಬಿ.ಪಿ. ವಾಡಿಯಾ ಸಭಾಂಗಣದಲ್ಲಿ ಬಿಡುಗಡೆಯಾಗಲಿದೆ. ಪುಸ್ತಕವನ್ನು ಹೊಸಕೋಟೆಯ ಯಾಜಿ ಪ್ರಕಾಶನ ಪ್ರಕಟಿಸಿದೆ.

ಡಾ. ಬಿ.ಎ. ವಿವೇಕ ರೈ ಅವರು ಅಧ್ಯಕ್ಷತೆ ವಹಿಸಲಿರುವ ಈ ಸಮಾರಂಭದಲ್ಲಿ ಖ್ಯಾತ ವಿಮರ್ಶಕ ಶ್ರೀ ಎಸ್.ಆರ್. ವಿಜಯಶಂಕರ ಅವರು ಪುಸ್ತಕದ ಬಗ್ಗೆ ಮಾತಾಡಲಿದ್ದಾರೆ. ಹಿರಿಯ ವಿದ್ವಾಂಸರಾದ ಡಾ. ಸಿ.ಎನ್. ರಾಮಚಂದ್ರನ್ ಮತ್ತು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯಂ ಅವರೂ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ಭಾರತೀಯ ಕವಿತಾ ಬಿಂಬದಲ್ಲಿ ಎಸ್.ಆರ್. ವಿನೇಶ್

ದೆಹಲಿಯ ವಸಂತ ಕುಂಜ್‌ನಲ್ಲಿರುವ ನ್ಯಾಷನಲ್ ಬುಕ್ ಟ್ರಸ್ಟ್‌ನಲ್ಲಿ ಕೆಲಸ ಮಾಡುತ್ತಿರುವ ಎಸ್. ಆರ್.ವಿನೇಶ್ ಅವರು ದೆಹಲಿಯ ಹಿಂದಿ ಅಕಾಡೆಮಿ ಇದೇ ಸೆಪ್ಟೆಂಬರ್ 6 ಮತ್ತು 7ರಂದು ನಡೆಸಿದ ಭಾರತೀಯ ಕವಿತಾ ಬಿಂಬದಲ್ಲಿ ತಮ್ಮ ಕನ್ನಡ ಕವಿತೆಯನ್ನು ಓದಿದರು. ವಿನೇಶ್ ಅವರ ಮಂಕುತಿಮ್ಮ ಹಾಗೂ ಆನೆ ಮತ್ತು ದುಡ್ಡು ಕವಿತೆಗಳನ್ನು ಹಿಂದಿಗೆ ಅನುವಾದಿಸಿ ಪ್ರಸ್ತುತ ಪಡಿಸಲಾಯಿತು. ಅಭಿಮತದಲ್ಲಿಯೂ ಅವರ ಅನೇಕ ಕವನಗಳು ಪ್ರಕಟಗೊಂಡಿವೆ.



## ಡಾ. ಎಲ್.ಎಸ್.ಭಟ್ ಅವರಿಗೆ ಶ್ರದ್ಧಾಂಜಲಿ

ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರು ಹಾಗೂ ಗೋಕರ್ಣ ಮಂಡಳದ ಸಂಸ್ಥಾಪಕರಲ್ಲಿ ಒಬ್ಬರೂ ಆಗಿದ್ದ ಡಾ. ಎಲ್.ಎಸ್.ಭಟ್ ಅವರು ನವಂಬರ್ 25ರಂದು ನಿಧನರಾದರು.

ದೆಹಲಿ ಕರ್ನಾಟಕ ಸಂಘ ಹಾಗೂ ಗೋಕರ್ಣ ಮಂಡಳ ಜಂಟಿಯಾಗಿ ಡಿಸೆಂಬರ್ 1 ರಂದು ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಿತು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಮಾಜಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಡಾ. ಬಿ.ವಿ. ಅಡ್ಕೋಳಿ, ಗೋಕರ್ಣ ಮಂಡಳದ ಪದಾಧಿಕಾರಿಗಳು ಹಾಗೂ ಮೃತರ ಕುಟುಂಬಸ್ಥರು, ಅಭಿಮಾನಿಗಳು ಭಾಗವಹಿಸಿದ್ದರು.



## ದೆಹಲಿಯಿಂದ ಚಂದನದಲ್ಲಿ ‘ಮಧುರ ಮಧುರ ವೀ ಮಂಜುಳಗಾನ’

ದೂರದರ್ಶನದ ಕನ್ನಡ ಚಾನೆಲ್ ಚಂದನದಲ್ಲಿ ಜನಪ್ರಿಯವಾಗಿ ಪ್ರಸಾರವಾಗುತ್ತಿರುವ ‘ಮಧುರ ಮಧುರ ವೀ ಮಂಜುಳಗಾನ’ ಕಾರ್ಯಕ್ರಮದ ಒಂದು ಕಂತನ್ನು ದೆಹಲಿಯಲ್ಲಿ ಚಿತ್ರೀಕರಿಸಲಾಗುವುದು. 2014ರ ಫೆಬ್ರವರಿಯಲ್ಲಿ ಚಂದನದಲ್ಲಿ ಪ್ರಸಾರವಾಗಲಿರುವ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರ ಆಯ್ಕೆಯ ಪ್ರಕ್ರಿಯೆಯು ಜನವರಿ 12ರಿಂದ ಆರಂಭಗೊಳ್ಳಲಿದೆ.

ಈ ನಿಟ್ಟಿನಲ್ಲಿ ದೆಹಲಿಯ ದೂರದರ್ಶನದ ಮಹಾ ನಿರ್ದೇಶನಾಲಯಕ್ಕೆ ವರ್ಗಾವಣೆಯಾಗಿ ಇತ್ತೀಚೆಗೆ ಬಂದ ದೂರದರ್ಶನದ ಹೆಚ್ಚುವರಿ ಮಹಾ ನಿರ್ದೇಶಕರಾದ ನಾಡೋಜ ಮಹೇಶ್ ಜೋಷಿ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ನವಂಬರ್ 24ರಂದು ದೆಹಲಿಯ ವಿವಿಧ ಕನ್ನಡ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಸಭೆಯನ್ನು ಕರೆದು ಸಮಾಲೋಚನೆ ನಡೆಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮದ ಯಶಸ್ಸಿಗೆ ದೆಹಲಿಯ ಕನ್ನಡಿಗರ ಸಹಕಾರ ಕೋರಿದರು. ಉಪಸ್ಥಿತರಿದ್ದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಕಾರ್ಯಕ್ರಮವನ್ನು ಚೆನ್ನಾಗಿ ನಡೆಸಿಕೊಡಲು ತಮ್ಮ ಸಹಕಾರ ಮತ್ತು ಸಹಯೋಗವನ್ನು ವ್ಯಕ್ತಪಡಿಸಿದರು.

ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ.
ಫೋನ್: 8860848584/8860848585–011–26109615 / 65643615 ಅ

## ಕ್ರಿಕೆಟ್ ಕೋಚ್ ಶಿವರಾಮು ರೈ ಅವರಿಗೆ ಭಡ್ತಿ

ದೆಹಲಿ ಪಬ್ಲಿಕ್ ಸ್ಕೂಲ್ ಆರ್.ಕೆ. ಪುರಂನಲ್ಲಿ ದೈಹಿಕ ಶಿಕ್ಷಕರಾಗಿರುವ ಮಾಜಿ ರಣಜಿ ಆಟಗಾರ ಶ್ರೀ ಎಂ. ಶಿವರಾಮು ರೈ ಅವರು ಡಿಸ್ಟ್ರಿಕ್ಟ್ ಮತ್ತು ದೆಹಲಿ ಕ್ರಿಕೆಟ್ ಅಸೋಸಿಯೇಶನ್(ಡಿಡಿಸಿಎ)ನಲ್ಲಿ ಅಂಡರ್– 25 ಕ್ರಿಕೆಟಿಗರ ಕೋಚ್ ಆಗಿ ಭಡ್ತಿಗೊಂಡಿದ್ದಾರೆ. ಇವರು 2013–14 ರ ಸಾಲಿನ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿಗಾಗಿ ದೆಹಲಿಯನ್ನು ಪ್ರತಿನಿಧಿಸುವ ಕ್ರಿಕೆಟ್ ತಂಡಕ್ಕೆ ತರಬೇತುದಾರರಾಗಿ ಸೇವೆ ನೀಡಲಿದ್ದಾರೆ ಅ



## ಬಾ. ಸಾಮಗ ಅವರಿಗೆ ಸನ್ಮಾನ

ಹೊರನಾಡಲ್ಲಿ ಕನ್ನಡ ಮತ್ತು ತುಳು ಸಂಸ್ಕೃತಿ ಪ್ರಗತಿಗೆ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ದೆಹಲಿ ಕನ್ನಡಿಗ’ಮತ್ತು ತುಳುವೆರ್’ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರನ್ನು ಬರೋಡದಲ್ಲಿ ತುಳು ಸಂಘ ನವೆಂಬರ್ 24ರಂದು ಏರ್ಪಡಿಸಿದ್ದ ಸಂಘದ ಬೆಳ್ಳಿ ಹಬ್ಬ ಸಮಾರಂಭದಲ್ಲಿ ಸಂಘದ ಗೌರವ ನಿರ್ದೇಶಕ, ಕಲಾವಿದ ಎನ್.ಜೆ. ಮೆಂಡನ್ ಅವರು ಶಾಲು ಹೊದಿಸಿ ಸನ್ಮಾನಿಸಿದರು. ಅ





## ಜ್ಯೋತಿ ರಾಧಾಕೃಷ್ಣ ಅವರಿಗೆ ಬೆಳ್ಳಿ ಪದಕ

ನವದೆಹಲಿಯ ಪ್ರಗತಿ ಮೈದಾನದಲ್ಲಿ ನವಂಬರ್ 14ರಿಂದ 27ರ ವರೆಗೆ ನಡೆದ ಭಾರತೀಯ ಅಂತರರಾಷ್ಟ್ರೀಯ ವ್ಯಾಪಾರ ಮೇಳ–2013ರಲ್ಲಿ ನಡೆದ ಆಹಾರ ಮೇಳದಲ್ಲಿ ಕರ್ನಾಟಕದ ಉಡುಪಿ ಎಂಟರ್‌ಪ್ರೈಸಸ್‌ನ ಕೋಡಿ ಜ್ಯೋತಿ ರಾಧಾಕೃಷ್ಣ ಅವರನ್ನು ಕೇಂದ್ರ ನವೀನ ಮತ್ತು ನವೀಕರಿಸಲಾಗುವ ಇಂಧನ ಸಚಿವರಾದ ಡಾ. ಫಾರೂಕ್ ಅಬ್ದುಲ್ಲಾ ಅವರು ಬೆಳ್ಳಿ ಪದಕ ನೀಡಿ ಅಭಿನಂದಿಸಿದ್ದಾರೆ. ಅ

## ಕೃಷ್ಣ ಕೋಲ್ಹಾರ ಕುಲಕರ್ಣಿ ಅವರಿಗೆ ಕನಕಶ್ರೀ ಪ್ರಶಸ್ತಿ

ಕರ್ನಾಟಕದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಮತ್ತು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಉಮಾಶ್ರೀ ಅವರ ಸಮ್ಮುಖದಲ್ಲಿ ಬಿಜಾಪುರದ ಡಾ. ಕೃಷ್ಣ ಕೋಲ್ಹಾರ ಕುಲಕರ್ಣಿ ಅವರಿಗೆ ಕರ್ನಾಟಕ ಸರಕಾರ ನೀಡುವ ಕನಕಶ್ರೀ ಪ್ರಶಸ್ತಿಯನ್ನು ನವಂಬರ್ 20ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ನೀಡಲಾಯಿತು.

ತಾರ್ ಮಾಸ್ತರ ಎಂದೇ ಹೆಸರು ಮಾಡಿರುವ ಡಾ. ಕುಲಕರ್ಣಿ ಅವರು ಗಮಕದ ಮೂಲಕ ದಾಸ ಸಾಹಿತ್ಯದ ಪ್ರಚಾರ ಕಾರ್ಯ ಮಾಡಿದ್ದಾರೆ. ಜೊತೆಗೆ 50ಕ್ಕೂ ಹೆಚ್ಚು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಅ






# ಕರ್ನಾಟಕ ಭವನದಲ್ಲಿ ರಾಜ್ಯೋತ್ಸವ

ಕರ್ನಾಟಕ ರಾಜ್ಯೋತ್ಸವವನ್ನು ನವದೆಹಲಿಯ ಕರ್ನಾಟಕ ಭವನದಲ್ಲಿ ನವೆಂಬರ್ 1ರಂದು ನಿವಾಸಿ ಆಯುಕ್ತ ಶ್ರೀಮತಿ ವಂದನಾ ಗುರ್ನಾನಿ ಅವರ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಜೃಂಭಣೆಯಿಂದ ಆಚರಿಸಲಾಯಿತು.

ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ನಾಡದೇವಿ ಭುವನೇಶ್ವರಿಗೆ ಪೂಜೆ ಸಲ್ಲಿಸಿ ನಾಡಗೀತೆ ಮತ್ತು ಕನ್ನಡ ಗೀತೆಗಳನ್ನು ಕರ್ನಾಟಕ ಭವನದ ಸಿಬ್ಬಂದಿಗಳು ಹಾಡಿದರು. ಈ ಸಂದರ್ಭದಲ್ಲಿ ಕರ್ನಾಟಕದ ಅಡ್ವಕೇಟ್ ಜನರಲ್ ಶ್ರೀ ರವಿವರ್ಮ ಕುಮಾರ್, ಭವನದ ಅಧಿಕಾರಿಗಳು ಮತ್ತು ಸಿಬ್ಬಂದಿವರ್ಗ ಉಪಸ್ಥಿತರಿದ್ದರು.

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳ ಮುಖ್ಯ ಅತಿಥಿಯಾಗಿ ಮಾತನಾಡಿದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿ ನಡೆದು ಬಂದ ದಾರಿಯ ಕುರಿತು ವಿವರಿಸಿದರು.

ಜಂಟಿ ನಿವಾಸಿ ಆಯುಕ್ತರಾದ ಶ್ರೀ ಸುಪ್ರಸನ್ನ ಅವರು ಪ್ರಸ್ತಾವಿಕ ಭಾಷಣದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಕೇವಲ ಕಾಟಚಾರಕ್ಕೆ ಆಚರಿಸುವಂತಾಗಬಾರದು ಎಂದರು. ಕನ್ನಡದ ಬಾವುಟವು ಎತ್ತರಕ್ಕೆ ನಿರಂತರವಾಗಿ ಸಾಗುವಂತಾಗಬೇಕು ಎಂದರು. ಅವರು ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸಿದರು. ಕನ್ನಡ ಮಾತೃ ಭಾಷೆ ಅಲ್ಲದಿದ್ದರು ಅಚ್ಚ ಕನ್ನಡದಲ್ಲಿ ಸುಲಲಿತವಾಗಿ ಮಾತನಾಡಿದ ಶ್ರೀಮತಿ ವಂದನಾ ಗುರ್ನಾನಿ ಅವರನ್ನು ಶ್ಲಾಘಿಸಿದರು.

ಶ್ರೀ ಟಿ.ಎಂ. ರಂಗಸ್ವಾಮಿ, ಜಂಟಿ ನಿವಾಸಿ ಆಯುಕ್ತರು ಮಾತನಾಡಿ ಕರ್ನಾಟಕ ಭವನದ ಸಿಬ್ಬಂದಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಇರುವ ಕಾಳಜಿಯನ್ನು ಪ್ರಶಂಸಿದರು. ಕರ್ನಾಟಕದಿಂದ ನಿಯೋಜನೆ ಮೇಲೆ ಇತ್ತೀಚೆಗೆ ಲೆಕ್ಕಾಧಿಕಾರಿಯಾಗಿ ಬಂದಿರುವ ಶ್ರೀಮತಿ ಟಿ.ಕೆ. ಶ್ರೀಲಕ್ಷ್ಮಿ ಅವರು ಕಾರ್ಯಕ್ರಮವನ್ನು ನಡೆಸುವಲ್ಲಿ ವಿಶೇಷ ಮುತುವರ್ಜಿ ವಹಿಸಿದ್ದರು.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜನಪದ ಗಾಯಕ ಶ್ರೀ ಸಿ.ಎಂ. ನರಸಿಂಹಮೂರ್ತಿ ಅವರ ತಂಡ ಹಾಗೂ ಬೆಂಗಳೂರಿನ ಆರಾಧನಾ ನೃತ್ಯ ಶಾಲೆಯ ಶ್ರೀ ನಾಗಭೂಷಣ ಅವರು ಕರ್ನಾಟಕ ಭವನದ ಸಿಬ್ಬಂದಿವರ್ಗದವರಿಗೆ ತರಬೇತಿ ನಡೆಸಿ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶೇಷ ನೃತ್ಯ, ನಾಡಗೀತೆ, ಜಾನಪದ, ಭಾವಗೀತೆ ಮತ್ತು ಕನ್ನಡಗೀತೆಗಳನ್ನು ಪ್ರಸ್ತುತ ಪಡಿಸಲಾಯಿತು. ಈ ಕಾರ್ಯಕ್ರಮಗಳನ್ನು ಶ್ರೀ ಟಿ.ಎಂ. ಮೈಲಾರಪ್ಪ ಅವರು ನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ಮೈಸೂರು ರಮಾನಂದ ಅವರ 'ಮೊಬೈಲಾಯಣ' ನಾಟಕವನ್ನು ಶಿವಾನಂದ ಇಂಗಳೇಶ್ವರ್ ಅವರ ನಿರ್ದೇಶನದಲ್ಲಿ ಪ್ರದರ್ಶಿಸಲಾಯಿತು. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ವಿತರಣೆಯನ್ನು ಮಾಡಲಾಯಿತು. ಉತ್ತರ ಕರ್ನಾಟಕ ಶೈಲಿಯ ಭೋಜನ ವ್ಯವಸ್ಥೆಯನ್ನು ಕೂಡ ಮಾಡಲಾಗಿತ್ತು. ಅ

**ಎಸ್.ಕುಮಾರ್,**
*ಕರ್ನಾಟಕ ಭವನ, ನವದೆಹಲಿ*

# ದೆಹಲಿ ಕನ್ನಡ ಶಾಲೆಯಲ್ಲಿ ರಾಜ್ಯೋತ್ಸವ

ದೆಹಲಿ ಕನ್ನಡ ಶಾಲೆಯಲ್ಲಿ ನವೆಂಬರ್ 1 ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಜವರಲಾಲ್ ವಿಶ್ವವಿದ್ಯಾಲಯದ ಕಾನೂನು ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಹೆಗಡೆ ಅವರು ಕನ್ನಡಕ್ಕಾಗಿ ಕನ್ನಡಿಗನು ಕೈಗೊಳ್ಳಬೇಕಾದ ಕಾರ್ಯಗಳ ಕುರಿತು ವಿಶೇಷ ಸಂದೇಶವನ್ನು ನೀಡಿದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್. ಕೃಷ್ಣ ಭಟ್ ಹಾಗೂ ಆಡಳಿತ ಮಂಡಳಿ ಸದಸ್ಯರುಗಳಾದ ಡಾ। ಅಹಲ್ಯಾ ಚಿಂತಾಮಣಿ, ಶ್ರೀ ಶ್ರೀನಿವಾಸ್, ಶ್ರೀಮತಿ ಆಶಾ ಕಾರ್ಯಪ್ಪ, ಶ್ರೀ ಕಾಶೀನಾಥ್, ಶ್ರೀಮತಿ ತಾರಾ ರಮೇಶ್ ಅವರು ಉಪಸ್ಥಿತರಿದ್ದರು.

ಪ್ರಾಂಶುಪಾಲ ಹಾಗೂ ಶಿಕ್ಷಕ ವೃಂದದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಭುವನೇಶ್ವರಿಯ ಭವ್ಯವಾದ ಮೆರವಣಿಗೆಯನ್ನು ನಡೆಸಿದರು. 'ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ' 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂಬ ಕನ್ನಡ ನಾಮಫಲಕಗಳು, 'ಕನ್ನಡವೇ ಉಸಿರು, ಕನ್ನಡವೇ ದೇವರು' 'ಕನ್ನಡವೇ ಬೆಳಕು, ಕನ್ನಡವೇ ಬದುಕು' ಎಂಬ ಘೋಷಣಾ ವಾಕ್ಯಗಳು, ಕನ್ನಡ ಜ್ಞಾನಪೀಠ ವಿಜೇತರ ಭಾವಚಿತ್ರಗಳು, ಕನ್ನಡ ಬಾವುಟದ ಹಳದಿ, ಕೆಂಪು ಬಣ್ಣದ ಉಡುಗೆಗಳು ಮೆರವಣಿಗೆಗೆ ಮೆರುಗನ್ನು ನೀಡಿದವು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಶ್ರೀ ಸಿ. ಎಂ. ನರಸಿಂಹ ಮೂರ್ತಿ ಅವರ ಜನಪದ ಕಲಾ ತಂಡದಿಂದ ಜನಪದ ಹಾಡುಗಳು ಮತ್ತು ನಾಡಗೀತೆಗಳನ್ನು ಪ್ರಸ್ತುತ ಪಡಿಸಿದರು. ಇದನ್ನು ಸಂಸ್ಥೆಯ ಸದಸ್ಯರಾದ ಶ್ರೀ ಟಿ. ಎಂ. ಮೈಲಾರಪ್ಪ ಅವರು ಸಂಘಟಿಸಿದ್ದರು.

ಕರ್ನಾಟಕ ರಾಜ್ಯೋತ್ಸವ ಆಚರಣೆಯ ಮಹತ್ವದ ಕುರಿತು ಕು. ಐಶ್ವರ್ಯ ಕನ್ನಡದಲ್ಲಿ, ಕು. ಪಾರ್ವತಿ ಆಂಗ್ಲ ಭಾಷೆಯಲ್ಲಿ ತಮ್ಮ ವಿಚಾರಗಳನ್ನು ಪ್ರಸ್ತುತಪಡಿಸಿದರು. ಕು. ಸಂಗೀತ ಪ್ರಾರ್ಥನಾ ಗೀತೆಯನ್ನು ಹಾಡಿದಳು. ಕು. ಜಾಹ್ನವಿ ಹಾಗೂ ಕು. ಸಂಧ್ಯಾ ಕನ್ನಡ ಗೀತೆಗಳನ್ನು ಹಾಡಿದರು. ಜತೆಗೆ ಶಾಲಾ ಪುಟಾಣಿಗಳು ನೃತ್ಯ ಮಾಡಿದರು.

ಶಿಕ್ಷಕ ವೃಂದದ ಶ್ರೀಮತಿ ಮಾಲಾ ಗೋಪಾಲ್, ಶ್ರೀಮತಿ ಅಕ್ಕಮಹಾದೇವಿ, ಶ್ರೀಮತಿ ಪ್ರೇಮಲತಾ, ಶ್ರೀಮತಿ ಜ್ಯೋತಿ ಪೊದ್ದಾರ್, ಶ್ರೀ ಎಚ್. ಎಸ್. ತೇಲಿ, ಶ್ರೀ ಅರವಿಂದ ಬಿಜ್ಜೆ ಅವರು ಕನ್ನಡ ಹಾಡುಗಳನ್ನು ಪ್ರಸ್ತುತ ಪಡಿಸಿದರು. ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ್ ಸ್ವಾಗತಿಸಿದರು. ಕನ್ನಡ ಶಿಕ್ಷಕಿ ಶ್ರೀಮತಿ ಎಂ. ಎಸ್. ಲಾವಣ್ಯ ಅವರು ಕಾರ್ಯಕ್ರಮ ನಿರೂಪಿಸಿದರು. ಅ

***ಎಂ. ಎಸ್. ಲಾವಣ್ಯ ಮತ್ತು ಅರವಿಂದ ಬಿಜ್ಜೆ***









## ದೆಹಲಿ ಕನ್ನಡ ಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟ

**ದೆ**ಹಲಿ ಕನ್ನಡ ಶಾಲೆಯಲ್ಲಿ ನವಂಬರ್ 9ರಂದು ನಡೆದ ವಾರ್ಷಿಕ ಕ್ರೀಡಾಕೂಟದಲ್ಲಿ ಖ್ಯಾತ ಅಥ್ಲೆಟಿಕ್ ಕ್ರೀಡಾ ಪಟು ಹಾಗೂ ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಡಾ. ಸತ್ಯವೀರ್ ಸಿಂಗ್ ಅವರು ಭಾಘವಹಿಸಿದರು.

ಶಾಲೆಯ ಆಡಳಿತ ಮಂಡಳಿಯ ವತಿಯಿಂದ ಉಪಾಧ್ಯಕ್ಷರುಗಳಾದ ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಬಸವರಾಜ ಎಸ್. ಮೇಟಿ, ಗೌರವ ಕಾರ್ಯದರ್ಶಿ ಶ್ರೀ ಆಂಜನಿ ಗೌಡ, ಶ್ರೀ ಶ್ರೀನಾಥ್ ಎನ್.ಆರ್., ಡಾ. ವಿ.ಆರ್. ಗುಡ್ಡೇಗೌಡ, ಶ್ರೀ ಕಾಶೀನಾಥ್ ಬಿರಾದಾರ, ಶ್ರೀ ರಾಧಾಕೃಷ್ಣ, ಶ್ರೀಮತಿ ತಾರಾ ರಮೇಶ್ ಮತ್ತು ಪ್ರಾಂಶುಪಾಲ ಶ್ರೀ ಕೆ.ಟಿ. ಗಣೇಶ್ ಉಪಸ್ಥಿತರಿದ್ದರು.

# ಗುರ್‌ಗಾಂವ್‌ನಲ್ಲಿ ಕರ್ನಾಟಕ ರಾಜ್ಯೋತ್ಸವ



ಕರ್ನಾಟಕ ಸರಕಾರದ ವಾರ್ತಾ ಇಲಾಖೆಯ ವತಿಯಿಂದ ಗುರ್‌ಗಾಂವ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಖ್ಯಾತ ವಿಮರ್ಶಕ ಮತ್ತು ಸಾಹಿತಿ ಪುರುಷೋತ್ತಮ ಬಿಳಿಮಲೆ ಅವರು ಉದ್ಘಾಟಿತ್ತಾ ಇತರೆ ಭಾಷೆಗಳ ಹಾವಳಿಯಿಂದ ಕನ್ನಡ ನಶಿಸುತ್ತದೆ ಎಂಬ ಆತಂಕ ಬೇಡ, ಕನ್ನಡ ಭಾಷೆಗೆ ಶತಮಾನಗಳ ಇತಿಹಾಸವಿದೆ, ಕನ್ನಡ ಭಾಷೆ ಇತರೆ ಭಾಷೆಗಳಿಗೆ ಮಾತೃಭಾಷೆಯ ಸ್ಥಾನದಲಿದೆ ಎಂದು ಹೇಳಿದರು.

ಇತರೆ ಭಾಷೆಗಳನ್ನು ಅರಗಿಸಿಕೊಂಡು ಗಟ್ಟಿಯಾಗಿ ನಿಲ್ಲುವ ಶಕ್ತಿಇದೆ. ಕನ್ನಡವನ್ನು ಮತ್ತಷ್ಟು ಗಟ್ಟಿಯಾಗಿ ಕಟ್ಟಬೇಕಾದರೆ ಮನೆಯಲ್ಲಿ ಕನ್ನಡವನ್ನೇ ಮಾತನಾಡಿ, ಇದರಿಂದ ನಮ್ಮ ಮಕ್ಕಳು ನಮ್ಮ ಸಂಸ್ಕೃತಿಯೊಂದಿಗೆ ಬೆಳೆಯಲು ಸಾದ್ಯ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಮೈಸೂರು ರಂಗಯಾಣದ ನಿರ್ದೇಶಕ ಜನಾರ್ದನ್ (ಜನ್ನಿ), ಹೊರನಾಡಿನಲ್ಲಿದ್ದರು ನೀವೆಲ್ಲಾ ಕನ್ನಡದ ಕೆಲಸಕ್ಕೆ ಲವಲವಿಕೆಯಿಂದ ತೊಡಗಿರುವುದನ್ನು ನೋಡಿದರೆ ಹೆಮ್ಮೆ ಎನ್ನಿಸುತ್ತದೆ. ನಾಡಿನಿಂದ ಸಾವಿರಾರೂ ಕಿಲೋ ಮೀಟರ್ ದೂರವಿದ್ದರು ಕನ್ನಡತನವನ್ನು ಉಳಿಸಿಕೊಂಡು, ಸ್ಥಳೀಯರಿಗೂ ನಾಡಿನ ವೈಭವದ ಸಂಸ್ಕೃತಿಯನ್ನು ಪರಿಚಯ ಮಾಡಿಕೊಡುತ್ತಿರುವ ನೀವೆಲ್ಲ ನಿಜವಾದ ಸಾಂಸ್ಕೃತಿಕ ರಾಯಬಾರಿಗಳು ಎಂದು ಹರ್ಷ ವ್ಯಕ್ತಪಡಿಸಿದರು.

ನಾಲ್ಕೈದು ಜನರೊಂದಿಗೆ ಅರಂಭವಾದ ಗುರ್‌ಗಾಂವ್ ಕನ್ನಡಸಂಘವಿಂದು ನೂರಾರು ಕನ್ನಡಿಗರು ಕೈಜೋಡಿಸುವುದರ ಮೂಲಕ ವಿಸ್ತರಗೊಳ್ಳುತ್ತಿದೆ. ಇದಕ್ಕೆ ವಾರ್ತಾಇಲಾಖೆಯ ಸಹಕಾರ ಮುಖ್ಯಕಾರಣ, ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಿಗೆ ವಾರ್ತಾಇಲಾಖೆ ಬೆಂಬಲ ನೀಡುವ ಮೂಲಕ ದೊಡ್ಡ ಪ್ರಮಾಣದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಂಪೂರ್ಣ ಪ್ರೋತ್ಸಾಹ ನೀಡುತ್ತಿದೆ. ಇದರಿಂದ ಹೊರನಾಡಿನಲ್ಲಿ ನಾವೆಲ್ಲ ಕನ್ನಡವನ್ನು ಮತ್ತಷ್ಟು ಗಟ್ಟಿಯಾಗಿ ಕಟ್ಟಲು ಸಹಾಯವಾಗಿದೆ ಎಂದು ಗುರ್‌ಗಾಂವ್ ಕನ್ನಡಸಂಘದ ಅಧ್ಯಕ್ಷ ವಸಂತರಾವ್ ತಿಳಿಸಿದರು.

ಹೊರರಾಜ್ಯದ ಕರ್ನಾಟಕ ಸಂಘಗಳು ಸರಕಾರವು ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪ್ರಸಾರಕ್ಕೆ ನೀಡುತ್ತಿರುವ ಸಹಾಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಹೊರನಾಡಿನಲ್ಲಿ ರಾಜ್ಯದ ಸಾಂಸ್ಕೃತಿಕ ರಾಯಬಾರಿಗಳಾಗಿ ಕನ್ನಡ ನಾಡಿನ ಹಿರಿಮೆಯನ್ನು ಹೆಚ್ಚಿಸಬೇಕೆಂದು ನವದೆಹಲಿಯ ಕರ್ನಾಟಕ ವಾರ್ತಾಕೇಂದ್ರದ ಉಪ ನಿರ್ದೇಶಕ ಎಲ್.ಪಿ.ಗಿರೀಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತಶೆಟ್ಟಿ ಮತ್ತು ಕಾರ್ಯದರ್ಶಿ ಸಿ.ಎಂ.ನಾಗರಾಜ ಅವರು, ಮುಂದಿನ ದಿನಗಳಲ್ಲಿ ಗುರ್‌ಗಾಂವ್ ಕನ್ನಡ ಸಂಘದ ಸಾಂಸ್ಕೃತಿಕ ಕಾರ್ಯಗಳಿಗೆ ದೆಹಲಿ ಕರ್ನಾಟಕ ಸಂಘವು ಮಾತೃ ಸ್ಥಾನದಲ್ಲಿ ನಿಂತು ಎಲ್ಲಾ ರೀತಿಯ ನೆರವು ನೀಡುವುದು ಎಂದು ತಿಳಿಸಿದರು. ಅ

# ದೆಹಲಿಯಲ್ಲಿ ಹಂಪಿ ಕಲಾ ಪ್ರದರ್ಶನ




ಛಾಯಾಚಿತ್ರ ಕಲಾವಿದ ಆನಂದ ಈಶ್ವರಪ್ಪ ಮುರಗೋಡ ಮತ್ತು ಗಣೇಶ ದೊಡ್ಡಮನಿಯವರ 'ದೆಹಲಿಯಲ್ಲಿ ಹಂಪಿ'ಕಲಾ ಪ್ರದರ್ಶನ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಜರುಗಿತು.

ನವಂಬರ್ 14ರಂದು ಮಕ್ಕಳ ದಿನಾಚರಣೆಯ ದಿನ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಮಾಸ್ಟರ್ ಪುರುಷೋತ್ತಮ್ ಅವರು ಡೊಳ್ಳು ಬಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟನೆಯಾಯಿತು.



ಬೆಂಗಳೂರಿನ ವಿಶಾಲ್ ಮುರಗೋಡ ಮತ್ತು ಓಶೋ ಮುರಗೋಡ ಕನ್ನಡ ಗೀತೆಗಳನ್ನು ಹಾಡಿದರು. ಖ್ಯಾತ ಚಿತ್ರ ಕಲಾವಿದ ಭೀಮರಾವ್ ಮುರಗೋಡ, ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಭಾಗವಹಿಸಿದ್ದರು. ಎರಡು ವಾರಗಳ ಕಾಲ ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ನಡೆಯಲಿರುವ ಈ ಕಲಾ ಪ್ರದರ್ಶನದಲ್ಲಿ ಹಂಪಿಯ ಗತ ವೈಭವವನ್ನು ಸ್ಮರಿಸುವ ಛಾಯಾಚಿತ್ರಗಳು ಮತ್ತು ತೈಲ ವರ್ಣ ಚಿತ್ರಗಳು ಪ್ರದರ್ಶನಗೊಂಡಿತು.

ಮುರುಗೋಡ ಅವರ ಛಾಯಾ ಚಿತ್ರ ಪ್ರದರ್ಶನವು ದೆಹಲಿಯ ಇಂಡಿಯಾ ಹೆಬಿಟೇಟ್ ಸೆಂಟರ್‌ನಲ್ಲಿ ಕೂಡಾ ನಡೆಯಿತು. ಅ




## ಓದುಗರ ಪತ್ರ

ಅಭಿಮತ ಸಂಚಿಕೆಗಳು ಪ್ರತಿ ತಿಂಗಳು ನನ್ನ ಕೈಸೇರುತ್ತಿವೆ.

ಅಕ್ಟೋಬರ್ 2013ರ ಸಂಚಿಕೆಯಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಹಂಚಿಕೊಂಡ "ಧನ ಸಂಗ್ರಹದ ಕೆಲವು ನೆನಪುಗಳು" ಬರಹದಲ್ಲಿ ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣದ ಕರ್ಮಯೋಗದಲ್ಲಿ ಡಾ. ಬಿಳಿಮಲೆ ಹಾಗೂ ಇತರ ಅಭಿಮಾನಿಗಳ ನಿಸ್ವಾರ್ಥ ಸೇವೆಯ ಪ್ರತಿಬಿಂಬ ಮೂಡಿಬಂದಿದೆ.

ಕನ್ನಡ ಅಭಿಮಾನಿಯಾಗಿ ನಾನಾಗ ಜನಕಪುರಿ ಕನ್ನಡ ಕೂಟದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಆಗ ಸಮುಚ್ಚಯ ನಿರ್ಮಾಣದ ತಯಾರಿ ಪ್ರಾರಂಭವಾಗಿತ್ತು. ಆ ಸಮಯದಲ್ಲಿ ಡಾ. ಬಿಳಿಮಲೆ ಅವರು ಅಭಿಮಾನಿಗಳಿಗೆ "ಒಂದೊಂದು ಇಟ್ಟಿಗೆಯ ರೂಪದಲ್ಲಿ ಸಮುಚ್ಚಯದ ನಿರ್ಮಾಣ ಕೆಲಸದಲ್ಲಿ ಸಹಕರಿಸಿ" ಎಂದು ಮನವಿ ಮಾಡಿಕೊಂಡದ್ದು ನನಗೆ ಈಗಲೂ ನೆನಪಾಗುತ್ತದೆ.

ಕಠಿಣ ಶ್ರಮದ ಫಲವಾಗಿ ಮೂಡಿಬಂದ ಸಮುಚ್ಚಯ ಇಂದು ಋಣಮುಕ್ತವಾಗಿದೆ ಎಂದು ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅಭಿಮತದ ಮುಖಾಂತರ ತಿಳಿಸಿದಾಗ ಸಂಘದ ಅಭಿಮಾನಿಗಳಿಗೆ ಆದ ಸಂತೋಷ, ಹೆಮ್ಮೆ ಊಹಿಸಲೂ ಅಸಾಧ್ಯ. ಸಂಘವು ಆದರ್ಶ ಮುಂದಾಳುತನದಲ್ಲಿ ಇನ್ನೂ ಹೆಚ್ಚಿನ ಸಮಾಜ ಉಪಯೋಗಿ ಕೆಲಸವನ್ನು ಮಾಡಲಿ ಎಂದು ಹಾರೈಸುತ್ತೇನೆ. ಅ

***ಜಿ.ವಿ. ನಾಯಕ್, ಬೆಂಗಳೂರು***

ಪೂರ್ತಿ ಪರಿಷ್ಕೃತಗೊಂಡು ಹೊಚ್ಚ ಹೊಸ ಆವಿಷ್ಕಾರದೊಂದಿಗೆ ಹೊರಬಂದ ಅಕ್ಟೋಬರ್ ಸಂಚಿಕೆ ಇನ್ನೇನು ಹೊಸತನವಿದೆ ಎಂದು ಪುಟ ತಿರುಗಿಸಲು ತೊಡಗಿಸಿಕೊಂಡುದು ಸತ್ಯವೇ ಹೌದು. ವಸಂತ ಶೆಟ್ಟಿ ಬೆಳ್ಳಾರೆ ಅವರ ಅಧ್ಯಕ್ಷತೆಯಲ್ಲಿ ಕಾರ್ಯರಂಗಕ್ಕಿಳಿದಿರುವ ದೆಹಲಿ ಕರ್ನಾಟಕ ಸಂಘ ಅಭಿಮತಕ್ಕಾಗಿ ಸಂಪಾದಕ ವರ್ಗಕ್ಕೆ ಮೂರು ಮಂದಿಗಳ ನಿಯೋಗವನ್ನು ಪ್ರಕಟಿಸಿಕೊಂಡಿದ್ದಾರೆ ಎಂಬಲ್ಲಿಂದ ಮಾಹಿತಿಯ ವಿವರಗಳು ಅರಿವಾಗತೊಡಗಿದವು. ಒಂದು ದೃಷ್ಟಿಯಿಂದ ಈ ರೀತಿಯಲ್ಲಿ ಮುಂದುವರಿಯುವುದು ಹೊಂದಾಣಿಕೆಗಳನ್ನು ಗೊಂದಲಗಳಿಗೆ ಎಡೆಮಾಡಿಕೊಡದೆ ಒಂದೂಗೂಡಿಸಲು ಅನಿವಾರ್ಯವೆನ್ನುವುದೂ ನಿಜ. ಮುಖಚಿತ್ರದಲ್ಲಿ ಮೂಡಿ ಬಂದ ಸಂಘದ ನೂತನ "ಆರ್ಟ್‌ಗ್ಯಾಲರಿ" ಇದರ ಭವ್ಯ ಹೊರನೋಟ ಪೂರಕವಾಗಿ ಇದರ ಉದ್ಘಾಟಕ ಕೇಂದ್ರ ಸಚಿವ ಆಸ್ಕರ್ ಫರ್ನಾಂಡಿಸ್ ಅವರ ಉಪಸ್ಥಿತಿಯಿಂದ ನಿರೀಕ್ಷಣೆಗೈಯಲ್ಪಡುತ್ತಿರುವ ಸರಳ ಸಾಕ್ಷೀಕೃತ ಚಿತ್ರ ಸಂಕುಲಗಳು ಕಥೆ ಹೇಳುವ ನನ್ನ ವ್ಯಥೆ ತಿಳಿಸುವ ಎನ್ನುವಂತೆ ಒಂದೊಂದಾಗಿ ಓದುಗರನ್ನು ಸೆರೆ ಹಿಡಿಯುವಂತಿದ್ದವು. ಹಿಂದಿನ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರು ಹಂಚಿಕೊಂಡ ಧನಸಂಗ್ರಹದ ನೆನಪುಗಳು ಇನ್ನಷ್ಟು ಇರಬಾರದಿತ್ತೇ ಅನ್ನಿಸಿದುದು ಹೌದು. ಅಪ್ಪನಿಗೊಂದು ಪತ್ರ ಎಂಬ ಕಥಾಂಗಣದಲ್ಲಿ ಒಪ್ಪಗೊಳಿಸಲ್ಪಟ್ಟ ಸುಶಾಂಥ ಸುಪ್ರಿಯ ಅವರ ಹಿಂದಿ ರೂಪಾಂತರವಾಗಿ ಚಂದ್ರಶೇಖರ ಎನ್.ಪಿ. ಅವರಿಂದ ಕನ್ನಡಕ್ಕೆ ಮೂಡಿ ಬಂದ ಸಂಭಾಷಣ ರೀತಿಯ ಒಕ್ಕಣೆಗಳು ಕಣ್ಣಾಲಿಗಳನ್ನು ತೇವಗೊಳಿಸಿದುದು ಸುಳ್ಳಲ್ಲ. ಕಥೆ ಎಂದೂ ತೋರಲಿಲ್ಲ. ನೇರಮಾತು ಎಂಬ ಅಂಕಣದಲ್ಲಿ ಮೂಡಿಬಂದ ಅಧ್ಯಕ್ಷರ ಮಾತು ಅವರು ನೀಡಿದ ಕಾರ್ಯಕ್ರಮಗಳ ಕಲ್ಪನೆಗಳು "ಭಳೀರೇ" ಅನ್ನಿಸಿಕೊಂಡಿವೆ. ಆದರೆ ನಿರಂತರ ನಾಟಕ ಹಾಗೂ ಈ ವಿಶೇಷ ಕಾರ್ಯಕ್ರಮಗಳಲ್ಲಿ ಕನ್ನಡದ ಜೊತೆಗೆ ಇತರ ಭಾಷಾ ಕಾರ್ಯಕ್ರಮವನ್ನು ನೀಡಬಹುದು ಎಂಬ ರೂಪಾಂತರ ತುಂಬಾ ಒಳ್ಳೆಯದೊಂದಿಗೆ ಮೂಲತಃ ಕರ್ನಾಟಕದವರಾಗಿರಬೇಕು ಎನ್ನುವ ಕಡ್ಡಾಯ ಏಕಾಗಿ ಎಂಬ ಪ್ರಶ್ನೆಯೊಂದು ಎನ್ನಲ್ಲಿ ಮೂಡಿಕೊಂಡುದು ಯತಾರ್ಥ, ವಿಶಾಲ ದೃಷ್ಟಿಯ ವಿಸ್ತೀರ್ಣತೆಗೆ ಕೇವಲ ಭಾಷೆ ರಾಜ್ಯ ಎಂಬ ಭೇದಬಾವ ಅಷ್ಟು ಸರಿಯೆಂದು ಎನಗೆ ತೋರಿ ಬರುತ್ತಿಲ್ಲ. ಇನ್ನಷ್ಟು ವಿವರಣೆ ನೀಡಿದರೆ ಒಳ್ಳೆಯದು ಎಂಬುದ ನನ್ನ ಕೇಳಿಕೆ.

ಇಪ್ಪತ್ತೈದನೆಯ ಅಂದರೆ 'ಬೆಳ್ಳಿ ಹಬ್ಬ'ದ ಎದುರುಗೊಳ್ಳುವಿಕೆಯಲ್ಲಿರುವ ಅಭಿಮತ ಇನ್ನಷ್ಟು ಮೇಲ್ಪಟ್ಟಕೇರಲಿ ಕರ್ನಾಟಕ ಸಂಘ ಎಲ್ಲರ ಸಂಘವಾಗಿ ಪ್ರಕಾಶಿಸುತ್ತಿರಲಿ ಎಂಬ ಶುಭ ಹಾರೈಕೆಗಳು. ಅ

***ಕೀರಿಕ್ಕಾಡು ವನಮಾಲಾ ಕೇಶ ಭಟ್ಟ, ಕಾಸರಗೋಡು.***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA PRINTING PRESS**

A HOUSE OF QUALITY PRINTING

C-95, Okhla Industrial Area
Phase-I, New Delhi – 110 020

PHONE: 011-40520770

MOBILE: 9811104398, 9811604398

E-MAIL: saujanyapp2010@gmail.com / hpgp2006@gmail.com



# ಹೆಜ್ಜೆ ಮೂಡಿಸಿ ಗುರುತು

ಚಿತ್ರ ಒಂದು. ಆಕಾಶದೆತ್ತರದ ನೀಲಿಯಲ್ಲಿ ಕೆಂಪು ಗ್ರಹವನ್ನು ಹುಡುಕುತ್ತಾ ಹೋಗುತ್ತಿದ್ದೇವೆ. ದಾರಿಯ ದೂರವನ್ನು ಅಳೆದಿದ್ದೇವೆ. ಪಯಣದ ಲೆಕ್ಕಾಚಾರವನ್ನು ಮುಗಿಸಿ ಹೆಜ್ಜೆ ಇಟ್ಟಿದ್ದೇವೆ. ಆ ಸಣ್ಣ ಬೆಳ್ಳಿ ಚುಕ್ಕೆಯು ತನ್ನೊಳಗಿಟ್ಟಿರುವ ಗುಟ್ಟುಗಳನ್ನು ಪತ್ತೆ ಹಚ್ಚಲು ನಮ್ಮ ಕಣ್ಣುಗಳನ್ನು ಕಳುಹಿಸಿದ್ದೇವೆ. ಮುಗಿಯದ ಪಯಣದ ಒಂದೊಂದು ಹೆಜ್ಜೆಯನ್ನು ಅತ್ಯಂತ ನಾಜೂಕಾಗಿ ಇಡುತ್ತಿದ್ದೇವೆ. ಅಲ್ಲಿ ಅಲೌಕಿಕವಾದುದನ್ನು ಕಾಣಲು ಕಾತರರಾಗಿದ್ದೇವೆ.

ಚಿತ್ರ ಎರಡು. ಆತ ಹಿಡಿದಿದ್ದ ಬ್ಯಾಟ್ ಅದೊಂದು ಕೌತುಕ. ಆತ ಆಡಿದ ಆಟ ಅವನನ್ನು ದೇವರನ್ನಾಗಿಸಿತು. ನೋಡಿದಷ್ಟೂ ದಣಿಯದ ಅವನ ಕೈ ಚಳಕ. ಅವನ ಭಕ್ತಿ ಕ್ರಿಕೆಟ್. ಇನ್ನೂ ಆಡಬೇಕು ಎಂದಿದ್ದು ಅವನು ಮಾತ್ರವಲ್ಲ, ನಾವು ಕೂಡಾ. ಯಾಕೆಂದರೆ ನಮಗೆ ಅವನು ನೀಡುತ್ತಿದ್ದ ಮನರಂಜನೆ. ಒಂದೊಂದು ಸಲವೂ ಹೊಸತು. ಆತನಿಲ್ಲದ ಮೈದಾನದಲ್ಲಿ ಗುಂಪು ಎಷ್ಟಿದ್ದರೂ ಅದು ಖಾಲಿ ಖಾಲಿ. ಸುದೀರ್ಘವಾದ ದಾಖಲೆಗಳ ಸುಲಲಿತ ಆಟಗಳಿಂದ ಆತ ತೆರಳಿದಾಗ ಕಣ್ಣೆವೆ ಒದ್ದೆಯಾಗಿದ್ದು ಆತನದ್ದು ಮಾತ್ರವಲ್ಲ.

ಕಾಲದ ಲೆಕ್ಕದ ಕ್ಯಾಲೆಂಡರ್‌ನ ಕೊನೆಯ ಪುಟದಲ್ಲಿ ನಾವಿದ್ದೇವೆ. ಹಳೆಯ ಪುಟಗಳಿಂದ ತೆಗೆದ ಎರಡು ಚಿತ್ರಗಳನ್ನು ಹಿಡಿಯುತ್ತಾ ಮುಂದಿನ ಕ್ಯಾಲೆಂಡರ್ ತೂಗು ಹಾಕಲು ತಯಾರಾಗುತ್ತಿದ್ದೇವೆ. ಮೇಲಿನದರಲ್ಲಿ ಒಂದು ಹೊಸ ಹೆಜ್ಜೆಯದು. ಇನ್ನೊಂದು ಸಾಧನೆಯ ಹೆಜ್ಜೆ ಗುರುತಿನದು. ಮತ್ತೆ ಹಲವು ಗುರುತಿಲ್ಲದ ಹೆಜ್ಜೆಗಳನ್ನು ನಮ್ಮ ಬದುಕಿನ ಒಂದು ವರ್ಷದಲ್ಲಿ ಕಳೆದಿದ್ದೇವೆ.

ನಡೆದ ದಾರಿಗಿಂತ ನಡೆಯಲಿರುವ ದಾರಿ ದೂರವಿದೆ. ಹೊಸ ವರ್ಷದ ಹೊಸ್ತಿಲಲ್ಲಿ ದೆಹಲಿ ಕರ್ನಾಟಕ ಸಂಘವು ಕೂಡಾ ಹೊಸತು ಹೆಜ್ಜೆಗಳನ್ನಿಡಲು ಅಣಿಯಾಗಬೇಕು. ಎಂದಿನಂತೆ, ಆಗಿರುವುದ್ದಕ್ಕಿಂತ ಮಾಡಬೇಕಾಗಿರುವುದೇ ಹೆಚ್ಚು ಇದೆ. ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಹೋಗಲಿರುವ ದಾರಿಯನ್ನು ಕ್ರಮಿಸುವಾಗ ಎಡವದೇ ಇಡುವ ಹೆಜ್ಜೆಗಳು ಹೊಸದೊಂದು ದಿಗಂತದತ್ತ ಸಾಗಿಸಬಹುದು.

ಒಂದೊಂದು ಹೆಜ್ಜೆಯೂ ಹೊಸ ಗುರುತನ್ನು ಮೂಡಿಸಲಿ. ಅ

*ಬಾಲಕೃಷ್ಣ ನಾಯ್ಕ್ ಡಿ.*

# KBL TRAVEL CARD

**Double your holiday excitement!**




Safe and easy way to use and carry your foreign exchange

This card can be frequently reloaded as per your requirement

# KBL GIFT CARD

**A great way to gift your loved one**




Card available in denominations starting from ₹ 500/- to ₹ 25,000/-

Freedom for the beneficiary to choose the gift

Shop, dine & purchase online

*Conditions apply

Call Toll Free No. 1800 425 1444 or Step into your nearest branch for details

**Karnataka Bank Ltd.**

**Your Family Bank. Across India.**


Regd. & Head Office: Mangalore - 575 002

E-mail: info@ktkbank.com Visit us at: www.karnatakabank.com

Delhi Karnataka Sangha Abhimatha Monthly,
December - 2013, Price Rs.1/- RNI Regn. No. 53405/91, DL-SW-1/4016/13-15
Printout Date : December 8th / 9th, Postal Date :10th / 11th, Total Pages-28

A PURAVANKARA Company

PROVIDENT™




**OWN A HOME WITH SUPERIOR FEATURES IN BANGALORE.**

FROM JUST RS. 32 LAC* ONWARDS.

**Provident Welworth City**
Yelahanka Doddaballapur Road
Ready-to-occupy **3BHK: Rs. 32 Lac***
1201 Apartments handed over

**Provident Sunworth**
Near Mysore Road-NICE Junction
**2BHK: Rs. 33 Lac* 3BHK: Rs. 40 Lac***
Construction in full swing by L&T Construction

*Including car park & clubhouse. Conditions apply. Statutory fees and government levies are extra.

Provident Sunworth and Welworth City are financed by ICICI Bank Ltd. & ICICI HFC Ltd.

**Landline: 080 4400 4400 Mobile: +91 81308 60877**

www.providenthousing.com | sales@providenthousing.com | CREDAI BENGALURU

SANKALP

BANGALORE | CHENNAI | COIMBATORE | MANGALORE

Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770